ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎ. ಪಾಟೀಲ್

ಕರ್ನಾಟಕ ರಾಜ್ಯ (ಭ್ರಷ್ಟಾಚಾರ ನಿಗ್ರಹದಳ ಉಡುಪಿ ಜಿಲ್ಲೆ -1) -ವಿರುದ್ಧ-ಶ್ರೀಮತಿ ಗಾಯತ್ರಿ ನಾಯಕ್ ಹಾಗೂ ಇನ್ನೊಬ್ಬರು

ಪುನರಾಲೋಕನ ಅರ್ಜಿ ಸಂಖ್ಯೆ:441/2018 ಇದರೊಂದಿಗೆ ಇತರೆ, ದಿನಾಂಕ 28 ನೇ ಸೆಪ್ಟೆಂಬರ್, 2018

ಆಜ್ಞೆ

ನ್ಯಾಯಮೂರ್ತಿ ಶ್ರೀ ಬಿ.ಎ. ಪಾಟೀಲ್:

1. ಖಾಸಗಿ ಫಿರ್ಯಾದು ಸಂಖ್ಯೆಗಳು.1/2017 ಮತ್ತು 1/2016ದಿನಾಂಕ: 24.2.2018 ರಲ್ಲಿ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಿಂದ (ಉಪವೇಶನ ಕುಂದಾಪುರದಲ್ಲಿ) ಜಾರಿಗೊಳಿಸಲಾದ ಆದೇಶವನ್ನು ಪ್ರಶ್ನಿಸಿ, ರಾಜ್ಯವು ಈ ಅಪರಾಧದ ಪರಿಷ್ಕರಣ ಅರ್ಜಿಗಳನ್ನು ಮಂಡಿಸಿರುತ್ತದೆ.

2. ಶ್ರೀ ವೆಂಕಟೇಶ್ ಪಿ. ದಳವಾಯಿ, ಅರ್ಜಿದಾರರ ಪರ ಸಾಮಾನ್ಯ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್, 1 ನೇ ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿ ಶ್ರೀ ದಿನೇಶ್ಕುಮಾರ್ ಕೆ. ರಾವ್ ಮತ್ತು 2 ನೇ ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿ ಶ್ರೀಮತಿ ಹಲೀಮಾ ಅಮೀನರವರ ವಾದಗಳನ್ನು ನಾನು ಆಲಿಸಿದ್ದೇನೆ.

3. ಈ ಎರಡು ಅಪರಾಧದ ಪರಿಷ್ಕರಣದ ಅರ್ಜಿಗಳು ಒಂದೇ ರೀತಿಯ ಸಂಗತಿಗಳು, ಸನ್ನಿವೇಶಗಳು ಮತ್ತು ಕಾನೂನಿನ ಪ್ರಶ್ನೆಯನ್ನು ಹೊಂದಿರುವುದರಿಂದಾಗಿ, ಆದೇಶಗಳನ್ನು ಪ್ರತ್ಯೇಕ ಖಾಸಗಿ ಫಿರ್ಯಾದುಗಳಲ್ಲಿ ಹೊರಡಿಸಿದ್ದರೂ, ಪ್ರಸ್ತುತ ಚಾಲ್ತಿಯಲ್ಲಿರುವ ದಾವೆಗಳಿಗೆ ಅನ್ವಯಿಸುವ ಕಾನೂನಿನ ಪುನರಾವರ್ತನೆಯನ್ನು ತಡೆಯುವ ದೃಷ್ಟಿಯಿಂದ ವಿಲೇ ಮಾಡುವ ಉದ್ದೇಶದಿಂದ ಎರಡೂ ಪ್ರಕರಣಗಳನ್ನು ಒಟ್ಟಿಗೆ ಸೇರಿಸಲಾಗಿದೆ.

4. ಎರಡು ಮೊಕದ್ದಮೆಗಳ ಸಾರಾಂಶವು, 2 ನೇ ಆಪಾದಿತೆಯ ಗಂಡ ಎಂದರೆ, 1 ನೇ ಆಪಾದಿತ ಮತ್ತು ದಾಖಲೆಗಳನ್ನು ತಿರುಚಲು ಪಿತೂರಿ ನಡೆಸಿದ ಇತರ ಆಪಾದಿತನನ್ನು ಒಳಗೊಂಡ ಸಮಿತಿಯಿಂದ ಆಕೆಯ ಹೆಸರಿನಲ್ಲಿ ಜಮೀನುಗಳ ಮಂಜೂರಾತಿಗೆ ಸಂಬಂಧಿಸಿದ ಕೆಲವು ಆಪಾದನೆಗಳನ್ನು ಆರೋಪಿಸಿ, ಪ್ರತ್ಯರ್ಜಿದಾರರ-ಆಪಾದಿತರ ವಿರುದ್ಧ ಖಾಸಗಿ ದೂರುಸಂಖ್ಯೆ: 1/2016 ಮತ್ತು 1/2017 ಗಳನ್ನು ಸಲ್ಲಿಸಲಾಗಿರುತ್ತದೆ ಎಂಬುದಾಗಿದೆ.ಮಾನ್ಯ ಮ್ಯಾಜಿಸ್ಟ್ರೇಟರುದಿನಾಂಕ: 02.11.2016 ಮತ್ತು 25.01.2017 ರ ತಮ್ಮ ಆದೇಶಗಳ ಮೂಲಕ, ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಅಡಿಯಲ್ಲಿನ ಅಧಿಕಾರವನ್ನು ಚಲಾಯಿಸಿ, ವಿಷಯವನ್ನು ತನಿಖೆಗಾಗಿ ಕಳುಹಿಸಿದ್ದಾರೆ ಮತ್ತು ತದನುಸಾರವಾಗಿ, ಆದೇಶಗಳನ್ನು ಅಧಿಕಾರ ವ್ಯಾಪ್ತಿಯ ಪೊಲೀಸರಿಗೆ ಕಳುಹಿಸಲಾಗಿದೆ, ಅಷ್ಟೇ ಅಲ್ಲದೆ, ವಿಷಯದ ತನಿಖೆ ನಡೆಯುತ್ತಿದ್ದಾಗ ಮತ್ತು ಅಂತಿಮ ವರದಿ ಇನ್ನೂ ದಾಖಲಿಸಬೇಕಾಗಿತ್ತು.ಅದೇ ಸಂದರ್ಭದಲ್ಲಿ, ಪ್ರತ್ಯರ್ಜಿದಾರರು ಆಪಾದಿತರು ದೂರುಗಳನ್ನು ವಜಾ ಮಾಡುವಂತೆ ಕೋರಿ, ದಂಡ ಪ್ರಕ್ರಿಯಾ ಸಂಹಿತೆಯ 156 ( 3) ಮತ್ತು 227 ನೇ ಪ್ರಕರಣದ ಅಡಿಯಲ್ಲಿ ಮತ್ತು ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮ, 1988 ರ 19 ನೇ ಪ್ರಕರಣದ ಅಡಿಯಲ್ಲಿ ಅರ್ಜಿಗಳನ್ನು ದಾಖಲಿಸಿರುತ್ತಾರೆಂದು ಹೇಳಲಾಗಿದೆ.

5. ಮಾನ್ಯ ನ್ಯಾಯಾಧೀಶರು, ಅಧಿಕಾರವನ್ನು ಚಲಾಯಿಸಿ ಅರ್ಜಿಗಳನ್ನು ಪುರಸ್ಕರಿಸಿದ್ದಾರೆ.ಅದನ್ನು ಖಂಡಿಸಿ, ರಾಜ್ಯವು ಈ ನ್ಯಾಯಾಲಯದ ಮುಂದೆ ಬಂದಿದೆ.

6. ಅರ್ಜಿದಾರ ರಾಜ್ಯದ ಪರ ಮಾನ್ಯ ನ್ಯಾಯವಾದಿಯವರು ಅಧೀನ ನ್ಯಾಯಾಲಯವು ವಿವೇಚನೆಯನ್ನು ಅನ್ವಯಿಸದೆ ದಂಡ ಪ್ರಕ್ರಿಯಾ ಸಂಹಿತೆಯ 156 ( 3) ಮತ್ತು 227 ನೇ ಪ್ರಕರಣಗಳ ಅಡಿಯಲ್ಲಿ ಹಾಗೂ ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮ, 1988 ರ ಪ್ರಕರಣ 19 ರ ಅಡಿಯಲ್ಲಿ ಸಲ್ಲಿಸಿದ ಅರ್ಜಿಗಳನ್ನು ಪುರಸ್ಕರಿಸಿದೆ ಮತ್ತು ಪ್ರತ್ಯರ್ಜಿದಾರರು ಆಪಾದಿತರನ್ನು ಖುಲಾಸೆಗೊಳಿಸಿದೆ.ಅಧೀನ ನ್ಯಾಯಾಲಯದ ಸದರಿ ಆದೇಶಗಳನ್ನು ವಾಸ್ತವವಾಗಿದಿನಾಂಕ: 02.11.2016 ಮತ್ತು 25.01.2017 ರ ಆದೇಶಗಳನ್ನು ವಾಪಸ್ಸು ತರಿಸಿಕೊಳ್ಳುವುದಕ್ಕಾಗಿ ಮಾಡಲಾಗಿದೆ ಎಂದು ವಾದಿಸಿದ್ದಾರೆ.ಅಷ್ಟೇ ಅಲ್ಲದೆ, ದಂಡ ಪ್ರಕ್ರಿಯಾ ಸಂಹಿತೆಯ 156

( 3) ನೇ ಪ್ರಕರಣದ ಅಡಿಯಲ್ಲಿ ಅಧಿಕಾರ ಚಲಾಯಿಸಿ, ಒಂದು ಸಲ ವಿಷಯವನ್ನು ತನಿಖೆಗೆ ಕಳುಹಿಸಿದ್ದಾಗ, ತದನಂತರ, ದಂಡ ಪ್ರಕ್ರಿಯಾ ಸಂಹಿತೆಯ 173 ( 2) ನೇ ಪ್ರಕರಣದ ಅಡಿಯಲ್ಲಿ ತನಿಖಾ ಏಜೆನ್ಸಿಯು ಅಂತಿಮ ತೀರ್ಪು ದಾಖಲಿಸುವವರೆಗೆ ದಂಡಾಧಿಕಾರಿಯ ಅಧಿಕಾರ ನಿಂತು ಹೋಗುತ್ತದೆ ಎಂದು ಅವರು ಹೇಳಿದ್ದಾರೆ.ಅಷ್ಟೇ ಅಲ್ಲದೆ, ತನಿಖೆಯನ್ನು ದಾಖಲಿಸುವ ಉದ್ದೇಶಕ್ಕಾಗಿ ಮಂಜೂರಾತಿಯು ಅತ್ಯಂತ ಅವಶ್ಯವಾಗಿದ್ದಾಗ ಅಧೀನ ನ್ಯಾಯಾಲಯವು ಹೊರಡಿಸಿದ ಸದರಿ ಆದೇಶಗಳು ನಿರಂಕುಶ ಮತ್ತು ತಪ್ಪು ಎಂದು ಅವರು ನಿವೇದಿಸಿದ್ದಾರೆ.

7. ಮುಂದುವರೆಸುತ್ತಾ ದಂಡ ಪ್ರಕ್ರಿಯಾ ಸಂಹಿತೆಯ 227 ನೇ ಪ್ರಕರಣದ ಅಡಿಯಲ್ಲಿ ದಾಖಲಿಸಲಾದ ಅರ್ಜಿಗಳನ್ನು ಪುರಸ್ಕರಿಸುವ ಮೂಲಕ ಕೆಳ ನ್ಯಾಯಾಲಯ ಗಂಭೀರವಾದ ತಪ್ಪನ್ನು ಎಸಗಿದೆ ಎಂದು ಅವರು ನಿವೇದಿಸಿದ್ದಾರೆ.ಮೇಲೆ ಹೇಳಲಾದ ವಾದಗಳನ್ನು ರುಜುವಾತು ಮಾಡುವ ದೃಷ್ಟಿಯಿಂದ, ಅರ್ಜಿದಾರರ ಪರ ಮಾನ್ಯ ವಕೀಲರು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಶೇಖ್ ಮಕ್ಸ್ದ ವಿರುದ್ಧ-ಸ್ಟೇಟ್ ಆಫ್ ಮಹಾರಾಷ್ಟ್ರ- (2009) 6 ಎಸ್.ಸಿ.ಸಿ 583, ಪ್ರಕರಣವನ್ನು ಆಧಾರವಾಗಿಟ್ಟುಕೊಂಡಿದ್ದಾರೆ.

8. ಇದಕ್ಕೆ ವಿರೋಧವಾಗಿ, 1 ನೇ ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಮಾನ್ಯ ನ್ಯಾಯಾಧೀಶರುದಿನಾಂಕ: 02.11.2016 ಮತ್ತು 25.01.2017 ರ ಆದೇಶವನ್ನು ಜಾರಿಗೊಳಿಸಿದಾಗ, ಸದರಿ ವ್ಯವಹರಣೆಗಳಿಗೆ ತಮ್ಮ ವಿವೇಚನೆಯನ್ನು ಅನ್ವಯಿಸಿದ್ದಾರೆ ಮತ್ತು ತದನಂತರ, ಅವರು ಒಂದು ಆದೇಶವನ್ನು ಪ್ರಕರಣ 156(3) ರ ಅಡಿಯಲ್ಲಿ ಹೊರಡಿಸಿದ್ದಾರೆಂಬ ವಿಷಯವನ್ನು ಸುಸ್ಪಷ್ಟವಾಗಿ ಸೂಚಿಸುತ್ತದೆ ಎಂದು ಆವೇಶಪೂರ್ಣವಾಗಿ ವಾದ ಮಾಡಿದ್ದಾರೆ ಮತ್ತು ನಿವೇದಿಸಿದ್ದಾರೆ.ಅವರು ಸಂಜ್ಞಾನವನ್ನು ಪಡೆದುಕೊಂಡಿದ್ದಾಗ, ಅಂಥ ಸನ್ನಿವೇಶಗಳಡಿ ದಂಡ ಪ್ರಕ್ರಿಯಾ ಸಂಹಿತೆಯ 227 ನೇ ಪ್ರಕರಣದೊಂದಿಗೆ ಓದಲಾದ 156(3)ನೇ ಪ್ರಕರಣದ ಅಡಿಯಲ್ಲಿ ಅರ್ಜಿಗಳನ್ನು ಪುರಸ್ಕರಿಸಬಹುದು.ಅವರು ಕೆಳ ನ್ಯಾಯಾಲಯದ ಆದೇಶಗಳನ್ನು ಉಲ್ಲೇಖಿಸುವ ಮೂಲಕ ಪ್ರತ್ಯರ್ಜಿದಾರ ಆಪಾದಿತ ಸಂಖ್ಯೆಗಳು 3 ಮತ್ತು 6 ಪಿಸಿಆರ್‌ಸಂಖ್ಯೆ: 1/2016 ಸರ್ಕಾರಿ ನೌಕರರಾಗಿದ್ದಾರೆ ಮತ್ತು ಅವರ ವಿರುದ್ಧ ಕ್ರಮ ಜರುಗಿಸಬೇಕಾದರೆ, ಆಗ ಅಂತಹ ಸನ್ನಿವೇಶಗಳಲ್ಲಿ, ಸಂಬಂಧಪಟ್ಟ ಸರ್ಕಾರಿ ಇಲಾಖೆಯಿಂದ ಪೂರ್ವ ಮಂಜೂರಾತಿ ಪಡೆಯುವುದು ತುಂಬಾ ಅವಶ್ಯಕ.ಸದರಿ ಸತ್ಯಾಂಶವನ್ನು ಕೆಳ ನ್ಯಾಯಾಲಯದ ಗಮನಕ್ಕೆ ತರಲಾಯಿತು ಮತ್ತು ಸದರಿ ಸತ್ಯಾಂಶವನ್ನು ಪರಿಗಣಿಸಿದ ನಂತರ, ಕೆಳ ನ್ಯಾಯಾಲಯ ಮನವಿಯನ್ನು ಸರಿಯಾಗಿ ಪುರಸ್ಕರಿಸಿದೆ ಮತ್ತು ಪ್ರತ್ಯರ್ಜಿದಾರ ಆಪಾದಿತರನ್ನು ಖುಲಾಸೆಗೊಳಿಸಿದೆ ಎಂದು ಅವರು ನಿವೇದಿಸಿದ್ದಾರೆ.

9. ಅವರು ತಮ್ಮ ವಾದವನ್ನು ಮುಂದುವರೆಸುತ್ತಾ, ಪ್ರತ್ಯರ್ಜಿದಾರ-ಆಪಾದಿತರು ಮುಗ್ಧರು ಮತ್ತು ಸಿ.ಆರ್.ಪಿ.ಸಿ.ಯ 156 ( 3) ನೇ ಪ್ರಕರಣದ ಅಡಿಯಲ್ಲಿ ಕ್ರಮ ಜರುಗಿಸಲು ಯಾವುದೇ ಸಾಕ್ಷ್ಯಾಧಾರಗಳು ಇಲ್ಲದಿದ್ದಾಗ್ಯೂ ಮಾನ್ಯ ಮ್ಯಾಜಿಸ್ಟ್ರೇಟರು ಈ ವಿಷಯವನ್ನು ತನಿಖೆಗೆ ಉಲ್ಲೇಖಿಸಿದ್ದಾರೆ ಎಂದು ನಿವೇದಿಸಿದ್ದಾರೆ.ಅಷ್ಟೇ ಅಲ್ಲದೆ, ಅವರು ಇಲ್ಲಿ ಏನಾದರೂ ಪ್ರಾರಂಭದಿಂದಲೂ ಅವ್ಯವಸ್ಥೆ ಅಥವಾ ಅಕ್ರಮತೆ ಇದ್ದರೆ, ಆಗ ಎರಡು ಆದೇಶಗಳನ್ನೂ ರದ್ದುಪಡಿಸಬೇಕು ಮತ್ತು ದೂರು ದಾಖಲಿಸಿದ ದಿನಾಂಕದಿಂದ, ಇದನ್ನು ವಿಚಾರಣೆ ಮಾಡುವುದಕ್ಕಾಗಿ ಅಧಿವಿಚಾರಣಾ ನ್ಯಾಯಾಲಯಕ್ಕೆ ವಿಷಯಗಳನ್ನು ಹಿಂದಕ್ಕೆ ಕಳುಹಿಸಬೇಕು ಎಂದು ನಿವೇದಿಸಿದ್ದಾರೆ.ಅಷ್ಟೇ ಅಲ್ಲದೆ, ಅಧಿವಿಚಾರಣಾ ನ್ಯಾಯಾಲಯದ ಆದೇಶಗಳನ್ನು ಸಮರ್ಥಿಸುವ ಮೂಲಕ, ಆದೇಶಗಳನ್ನು ಜಾರಿ ಮಾಡುವ ಸಂದರ್ಭದಲ್ಲಿ ಅಧಿವಿಚಾರಣಾ ನ್ಯಾಯಾಲಯ ಯಾವುದೇ ಅಕ್ರಮತೆಯನ್ನು ಎಸಗಿಲ್ಲ ಎಂದು ನಿವೇದಿಸಿದ್ದಾರೆ.ಈ ಆಧಾರಗಳ ಮೇಲೆ, ಎಲ್ಲಾ ಅರ್ಜಿಗಳನ್ನು ವಜಾ ಮಾಡಬೇಕೆಂದು ಅವರು ಕೋರಿದ್ದಾರೆ.

10. 2 ನೇ ಪ್ರತ್ಯರ್ಜಿದಾರರ ಪರ ಮಾನ್ಯ ವಕೀಲರಾದ ಶ್ರೀಮತಿ ಹಲೀಮಾ ಅಮೀನಾ ರವರು 1 ನೇ ಪ್ರತ್ಯರ್ಜಿದಾರರ ಪರ ಮಾನ್ಯ ವಕೀಲರ ವಾದಗಳನ್ನು ಬೆಂಬಲಿಸುತ್ತಾ, ಅಧಿವಿಚಾರಣಾ ನ್ಯಾಯಾಲಯವು ಕಾನೂನಿನ ಅಂಶಗಳನ್ನು ಪರಿಗಣಿಸಿದ ನಂತರ ಹಲವಾರು ಉಚ್ಚ ನ್ಯಾಯಾಲಯಗಳ ನಿರ್ಣಯಗಳನ್ನು ಆಧರಿಸಿ, ಸರಿಯಾಗಿಯೇ ಪ್ರಶ್ನಿತ ಆದೇಶವನ್ನು ಜಾರಿಮಾಡಿದೆ.ಅರ್ಜಿಗಳನ್ನು ಪುರಸ್ಕರಿಸುವಲ್ಲಿ ಯಾವುದೇ ಅವ್ಯವಸ್ಥೆ ಅಥವಾ ಅಕ್ರಮತೆ ಇಲ್ಲ ಎಂದು ಆವೇಶದಿಂದ ವಾದಿಸಿದರು.ಈ ಆಧಾರಗಳ ಮೇಲೆ ಅರ್ಜಿಗಳನ್ನು ವಜಾಗೊಳಿಸಬೇಕೆಂದು ಸಹ ಅವರು ಕೋರಿದ್ದಾರೆ.ಈ ನ್ಯಾಯಾಲಯದ ಮುಂದೆ ದೂರುದಾರನನ್ನು ಒಬ್ಬ

ಪಕ್ಷಕಾರನ್ನಾಗಿ ಮಾಡಲಾಗಿಲ್ಲ ಮತ್ತು ಅದರಂತೆ ಅರ್ಜಿಗಳು ಸಹ ಕಾನೂನಿನಲ್ಲಿ ನಡೆಸಲು ಯೋಗ್ಯವಾಗಿಲ್ಲ.ಈ ಆಧಾರದ ಮೇಲೆ, ಅರ್ಜಿಗಳನ್ನು ವಜಾಗೊಳಿಸಬೇಕೆಂದು ಅವರು ಕೋರಿದ್ದಾರೆ.

11. ಪಕ್ಷಕಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು ಸಲ್ಲಿಸಿದ ನಿವೇದನೆಗಳನ್ನು ನಾನು ಜಾಗರೂಕತೆಯಿಂದ ಮತ್ತು ಎಚ್ಚರಿಕೆಯಿಂದ ಪರಿಶೀಲಿಸಿದ್ದೇನೆ ಮತ್ತು ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಪ್ರಶ್ನಿತ ಆದೇಶಗಳನ್ನು ಸಹ ಪರಿಶೀಲಿಸಿದ್ದೇನೆ ಹಾಗೂ ಈ ಸಂಬಂಧ ಲಭ್ಯವಿರುವ ಇತರೆ ಸಾಕ್ಷ್ಯಾಧಾರಗಳನ್ನು ಸಹ ಪರಿಶೀಲಿಸಿದ್ದೇನೆ.

12. ದಾಖಲೆಗಳಿಂದ ಕಂಡುಬಂದಿರುವಂತೆ, ಇದು ವಿವಾದವಲ್ಲದ ಸತ್ಯಾಂಶ ಎಂದು ಪ್ರತ್ಯರ್ಜಿದಾರ-ಆಪಾದಿತರ ವಿರುದ್ಧ ಐ.ಪಿ.ಸಿ.ಯ ಪ್ರಕರಣ 120 ಬಿ ಮತ್ತು ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮ, 1908 ರ ಪ್ರಕರಣ 13 ರಡಿ ಶಿಕ್ಷಾರ್ಹ ಅಪರಾಧಕ್ಕಾಗಿ ದಂಡ ಪ್ರಕ್ರಿಯಾ ಸಂಹಿತೆಯ 200 ನೇ ಪ್ರಕರಣದ ಅಡಿದಿನಾಂಕ: 24.11.2017 ರಂದು ಪಿಸಿಆರ್ ಸಂ .1/2016 ರಲ್ಲಿ ಶ್ರೀ ಸುರೇಶ್ ಶೆಟ್ಟಿ ಎಂಬುವವರು ಖಾಸಗಿ ದೂರನ್ನು ದಾಖಲಿಸಿದ್ದಾರೆ ಮತ್ತು ಆದ್ದರಿಂದ, ಮಾನ್ಯ ಮ್ಯಾಜಿಸ್ಟ್ರೇಟರುದಿನಾಂಕ: 02.11.2016 ರ ಆದೇಶದ ಮೂಲಕ, ದಾಖಲೆಯಲ್ಲಿನ ಸಾಕ್ಷ್ಯಾಧಾರಗಳನ್ನು ಪರಿಗಣಿಸಿದ ನಂತರ ಈ ಕೆಳಗಿನ ಆದೇಶವನ್ನು ಜಾರಿಗೊಳಿಸಿದ್ದಾರೆ:

" ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮ, 1908 ರ 13 ನೇ ಪ್ರಕರಣದ ಅಡಿ ಮತ್ತು ಐಪಿಸಿ 120 ನೇ ಪ್ರಕರಣದಡಿ 1 ರಿಂದ 6 ವರೆಗಿನ ಆರೋಪಿಗಳ ವಿರುದ್ಧ ವ್ಯವಹರಣೆಗಳನ್ನು ಪ್ರಾರಂಭಿಸುವುದಕ್ಕೆ ದಂಡ ಪ್ರಕ್ರಿಯಾ ಸಂಹಿತೆಯ 200 ನೇ ಪ್ರಕರಣದ ಅಡಿ ದೂರು ಸಲ್ಲಿಸಿದ್ದು, ಅದರ ಬಗ್ಗೆ ಉಡುಪಿಯ ಭ್ರಷ್ಟಾಚಾರ ವಿರೋಧಿ ದಳವು, ಡಿವೈಎಸ್ಪಿ ರವರಿಂದ ತನಿಖೆಯಾಗಬೇಕೆಂದು ಆದೇಶಿಸಲಾಗಿದೆ ಮತ್ತು ಐ.ಪಿ.ಸಿ.ಯ ಪ್ರಕರಣ 120 ರ ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ ಪ್ರಕರಣ 13 (ಸಿ) ಮತ್ತು ಸಂಬಂಧಿತ ಪ್ರಕರಣಗಳಡಿ ಹಾಗೂ 1 ರಿಂದ 5 ರ ವರೆಗಿನ ಆರೋಪಿಗಳ ವಿರುದ್ಧ ಐ.ಪಿ.ಸಿ. ಪ್ರಕರಣ 120 ರ ಅಡಿ ಎಫ್.ಐ.ಆರ್. ದಾಖಲಿಸಿದೆ.

ಆರೋಪಿ ಸಂಖ್ಯೆ .6 ಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, ಆರೋಪಿ 1 ರಿಂದ 5 ರ ವರೆಗಿನ ಆರೋಪಿಗಳ ಒಳಗೊಳ್ಳುವಿಕೆಗೆ ಸಂಬಂಧಿಸಿದ ಸಾಕ್ಷ್ಯದ ಸಂಗ್ರಹಕ್ಕೆ ಸಂಬಂಧಿಸಿ ಮಾತ್ರ ಆರೋಪಿ ಸಂಖ್ಯೆ .6 ರ ವಿರುದ್ಧ ಎಫ್.ಐ.ಆರ್. ದಾಖಲಿಸಿದೆ.ತನಿಖಾಧಿಕಾರಿಯು ತನ್ನ ಮುಂದೆ ಹೇಳಿಕೆ ಕೊಡಲು ಆಕೆಯನ್ನು ಕರೆಸುವ ಬದಲಾಗಿ ಆರೋಪಿ ಸಂಖ್ಯೆ.ಇನ್ನು ದಸ್ತಗಿರಿಗೆ ನಿರ್ಬಂಧಿಸಿ, ಆರೋಪಿ ಸಂ .6 ರ ವಿರುದ್ಧವಾಗಿ ಮುಂದುವರೆಯುವುದಕ್ಕೆ ಮುಂಚೆ ಈ ನ್ಯಾಯಾಲಯಕ್ಕೆ ತಿಳಿಸತಕ್ಕದ್ದು ಮತ್ತು ಕಂದಾಯ ಭೂಮಿಯ ಮಂಜೂರಾತಿಯ ಸಂಬಂಧದಲ್ಲಿ ಮಾಡಿದ (ಅಪರಾಧ) ಆಪಾದಿಸಲಾದ ಅಪರಾಧಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸತಕ್ಕದ್ದು.ಯಾವುದೇ ಸಂದರ್ಭದಲ್ಲಿ ತನಿಖಾಧಿಕಾರಿಯು ಆರೋಪಿ ಸಂ .6 ನ್ನು ದಸ್ತಗಿರಿ ಮಾಡಬೇಕೆಂದು ಅಭಿಪ್ರಾಯಪಟ್ಟರೆ, ಮಂಜೂರಿನ ಪ್ರಶ್ನೆ ಉದ್ಭವಿಸುತ್ತದೆ.ಇದಕ್ಕೆ ಸಂಬಂಧಿಸಿದಂತೆ, ತನಿಖಾಧಿಕಾರಿಯು ಈ ನ್ಯಾಯಾಲಯದ ಪೂರ್ವಾನುಮತಿಯನ್ನು ತೆಗೆದುಕೊಳ್ಳಬೇಕು ಮತ್ತು ತನಿಖೆಯನ್ನು ನಡೆಸುವಾಗ ಸಂದರ್ಭದ ತನಿಖೆಗೆ ಅವಶ್ಯವೆಂದು ಕಂಡುಬಂದರೆ, ಆರೋಪಿ ಸಂಖ್ಯೆ.ಇನ್ನು ಬಂಧಿಸಲು ಕ್ರಮ ತೆಗೆದುಕೊಳ್ಳತಕ್ಕದ್ದು.ಆದ್ದರಿಂದ, ಆರೋಪಿ ಸಂ .1 ರಿಂದ 6 ರ ವಿರುದ್ಧ ಎಫ್ಐಆರ್ ದಾಖಲಿಸತಕ್ಕದ್ದು.ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ ಪ್ರಕರಣ 13 ರ ಮತ್ತು ಐ.ಪಿ.ಸಿ.ಯ 120 ನೇ ಪ್ರಕರಣದ ಉಲ್ಲಂಘನೆಗೆ ಸಂಬಂಧಿಸಿದಂತೆ ಕೇವಲ ಆರೋಪಿ ಸಂಖ್ಯೆ.1 ರಿಂದ 5 ರ ವರೆಗಿನ ಆರೋಪಿಗಳ ವಿರುದ್ಧ ಮಾತ್ರ ತನಿಖೆ ನಡೆಸಲಾಗಿರುತ್ತದೆ.

ದೂರಿನೊಂದಿಗೆ ಲಗತ್ತಿಸಿದ ದಾಖಲೆಗಳ ಒಂದು ಜೊತೆ ಪ್ರತಿಗಳನ್ನು ಒದಗಿಸಬೇಕೆಂದು ದೂರುದಾರನಿಗೆ ತಿಳಿಸುವಂತೆ ಕಚೇರಿಗೆ ನಿರ್ದೇಶಿಸಲಾಗಿದ್ದು, ಅದಕ್ಕೆ ಪ್ರತಿಯಾಗಿ ಕಚೇರಿಯ ವಿಷಯವನ್ನು ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಅಡಿ ಭ್ರಷ್ಟಾಚಾರ ನಿಗ್ರಹ ದಳ, ಉಡುಪಿ ಇವರಿಗೆ ಉಲ್ಲೇಖಿಸಿರುತ್ತದೆ."

13. ಸದರಿ ಆದೇಶವನ್ನು ಅವಲೋಕಿಸಿದಾಗ, ಅವರು ವಿಷಯವನ್ನು ತನಿಖೆ ಮಾಡಲು ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಅಡಿ ಡಿ.ವೈ.ಎಸ್.ಪಿ. ಭ್ರಷ್ಟಾಚಾರ ನಿಗ್ರಹ ದಳ, ಉಡುಪಿ ರವರಿಗೆ ಅಂತಿಮ ವರದಿಯನ್ನು ನಿರೀಕ್ಷಿಸಿ ಮೊಕದ್ದಮೆಯನ್ನು ಕಳಿಸಲಾಗಿದೆ ಎಂಬುದನ್ನು ಇದು ಸೂಚಿಸುತ್ತದೆ ಮತ್ತುದಿನಾಂಕ: 05.11.2016 ರಂದು ದಾಖಲೆಗಳೊಂದಿಗೆ ಆದೇಶದ ಪ್ರತಿಯನ್ನು ಭ್ರಷ್ಟಾಚಾರ ನಿಗ್ರಹದಳ, ಉಡುಪಿ ರವರಿಗೆ ಕಳುಹಿಸಿದೆ ಎಂದು ಆದೇಶಪತ್ರದಲ್ಲಿ ಸೂಚಿಸಿದಾಗ್ಯೂ,ದಿನಾಂಕ: 02.11.2016 ರಂದು ಆದೇಶವನ್ನು

ಹೊರಡಿಸುವ ಸಂದರ್ಭದಲ್ಲಿ ಮಾನ್ಯ ನ್ಯಾಯಿಕ ದಂಡಾಧಿಕಾರಿಗಳು ತಮ್ಮ ವಿವೇಚನೆಯನ್ನು ಬಳಸಿದ್ದಾರೆ ಮತ್ತು ಸಂಜ್ಞಾನಕ್ಕೆ ತೆಗೆದುಕೊಂಡಿದ್ದಾರೆ ಎಂಬುದು ಪ್ರತಿವಾದಿ ಸಂ .1 ರ ಪರ ಮಾನ್ಯ ನ್ಯಾಯವಾದಿಯ ವಾದಾಂಶವಾಗಿದ್ದರೂ, ಅಂತಹ ಸಂದರ್ಭಗಳಲ್ಲಿ, ದಂಡ ಪ್ರಕ್ರಿಯಾ ಸಂಹಿತೆಯ 227 ನೇ ಪ್ರಕರಣದ ಅಡಿ ತರುವಾಯದಲ್ಲಿ ಸಲ್ಲಿಸಲಾದ ಅರ್ಜಿಗಳನ್ನು ಪುರಸ್ಕರಿಸಲು ಅವರಿಗೆ ಎಲ್ಲ ಅಧಿಕಾರವಿದೆ.

14. ಸದರಿ ಆದೇಶವನ್ನು ಅವಲೋಕಿಸಿದಾಗ, ಸಿ.ಆರ್.ಪಿ.ಸಿ.ಯ 190 ನೇ ಪ್ರಕರಣದ ಅಡಿ ಮ್ಯಾಜಿಸ್ಟ್ರೇಟರು ತಮಗೆ ನಿಹಿತವಾದ ಅಧಿಕಾರಗಳಲ್ಲಿ, ಒಂದು ಅಧಿಕಾರವನ್ನು ಚಲಾಯಿಸಿದ್ದಾರೆ ಎಂದು ಅದು ಸೂಚಿಸುತ್ತದೆ.ಸಂಕ್ಷಿಪ್ತತೆಯ ಉದ್ದೇಶಕ್ಕಾಗಿ, ನಾನು ಸಿ.ಆರ್.ಪಿ.ಸಿ.ಯ ಪ್ರಕರಣ 190 ನ್ನು ಉಲ್ಲೇಖಿಸುತ್ತೇನೆ.ಅದನ್ನು ಈ ಕೆಳಗಿನಂತೆ ಓದಲಾಗುತ್ತದೆ:

“190. ಮ್ಯಾಜಿಸ್ಟ್ರೇಟರಿಂದ ಅಪರಾಧಗಳ ಸಂಜ್ಞೇಯತೆ

(1) ಈ ಅಧ್ಯಾಯದ ಉಪಬಂಧಗಳಿಗೊಳಪಟ್ಟು, ಉಪ ಪ್ರಕರಣದ ( 2) ರ ಅಡಿಯಲ್ಲಿ, ಈ ಸಂಬಂಧ ವಿಶೇಷ ಅಧಿಕಾರ ಹೊಂದಿದ ಪ್ರಥಮ ದರ್ಜೆಯ ಯಾರೇ ದಂಡಾಧಿಕಾರಿ ಮತ್ತು 2 ನೇ ದರ್ಜೆಯ ಯಾರೇ ದಂಡಾಧಿಕಾರಿಯು

(ಎ) ಇಂತಹ ಅಪರಾಧ ಉಂಟುಮಾಡುವ ಸಂಗತಿಗಳ ಒಂದು ದೂರನ್ನು ಸ್ವೀಕರಿಸಿದ ಆಧಾರದ ಮೇಲೆ

(ಬಿ) ಅಂತಹ ಸಂಗತಿಗಳ ಒಂದು ಪೊಲೀಸ್ ವರದಿಯ ಆಧಾರದ ಮೇಲೆ:

(ಸಿ) ಪೊಲೀಸ್ ಅಧಿಕಾರಿಯನ್ನು ಹೊರತುಪಡಿಸಿ ಯಾರೇ ವ್ಯಕ್ತಿಯಿಂದ ಮಾಹಿತಿಯನ್ನು ಸ್ವೀಕರಿಸಿದ ತರುವಾಯ ಅಥವಾ ಅಪರಾಧ ಎಸಗಿದ್ದಾನೆಂಬ ಅವನ ಸ್ವಂತ ತಿಳಿವಳಿಕೆಯ ಆಧಾರದ ಮೇಲೆ-

-ಯಾವುದೇ ಅಪರಾಧದ ಸಂಜ್ಞಾನವನ್ನು ತೆಗೆದುಕೊಳ್ಳಬಹುದು.

(2) ಮುಖ್ಯ ನ್ಯಾಯಿಕ ದಂಡಾಧಿಕಾರಿಯು, ಎರಡನೇ ದರ್ಜೆಯ ಯಾರೇ ದ ಂ ಡಾಧಿಕಾರಿಗೆ ಅ ಂ ಥ ಅಪರಾಧಗಳು ಅವನ ದಕ್ಷತೆಯೊಳಗೆ ವಿಚಾರಣೆ ಅಥವಾ ಅಧಿವಿಚಾರಣೆ ಮಾಡಲು ಸಾಧ್ಯವಿರುವುದರಿಂದ, ಅಂತಹ ಅಪರಾಧಗಳ ಬಗ್ಗೆ, ಉಪ ಪ್ರಕರಣ (1) ರ ಅಡಿ ಸಂಜ್ಞಾನವನ್ನು ತೆಗೆದುಕೊಳ್ಳಲು ಅಧಿಕಾರ ನೀಡಬಹುದು.”

15. ದಂಡ ಪ್ರಕ್ರಿಯಾ ಸಂಹಿತೆಯ 200 ನೇ ಪ್ರಕರಣ ಉಲ್ಲೇಖಿಸುವುದು ಯುಕ್ತ ಮತ್ತು ನ್ಯಾಯಯುತವಾಗಿದೆ ಎಂದು ಸಹ ನಾನು ಭಾವಿಸುತ್ತೇನೆ, ಅದನ್ನು ಕೆಳಗಿನಂತೆ ಓದಲಾಗುತ್ತದೆ:

“200. ದೂರುದಾರನ ಪರೀಕ್ಷೆ-ದೂರುದಾರರು ಮತ್ತು ಸಾಕ್ಷಿದಾರರು ಯಾರಾದರೂ ಹಾಜರಿದ್ದರೆ, ಪ್ರತಿಜ್ಞೆಯ ಮೇಲೆ ಪರೀಕ್ಷಿಸಿ ದೂರುದಾರನ ಮೇಲೆ ಅಪರಾಧದ ಸಂಜ್ಞಾನವನ್ನು ಒಬ್ಬ ದಂಡಾಧಿಕಾರಿ ತೆಗೆದುಕೊಂಡು ಮತ್ತು ಅಂತಹ ಪರೀಕ್ಷೆಯ ಸಾರಾಂಶ (ವಸ್ತು) ವನ್ನು ಬರಹಕ್ಕೆ ಇಳಿಸತಕ್ಕದ್ದು ಮತ್ತು ದೂರುದಾರ ಮತ್ತು ಸಾಕ್ಷಿದಾರರು ಹಾಗೂ ದಂಡಾಧಿಕಾರಿಯು ಕೂಡ ಸಹಿ ಮಾಡತಕ್ಕದ್ದು:

ಪರಂತು, ದೂರನ್ನು ಬರವಣಿಗೆಯಲ್ಲಿ ಮಾಡಿದ್ದರೆ, ದಂಡಾಧಿಕಾರಿಯು ದೂರುದಾರ ಮತ್ತು ಸಾಕ್ಷಿದಾರರನ್ನು ಪರೀಕ್ಷಿಸುವ ಅವಶ್ಯಕತೆ ಇರುವುದಿಲ್ಲ.

(ಎ) ಒಬ್ಬ ಸರ್ಕಾರಿ ನೌಕರ ಕಾರ್ಯನಿರ್ವಹಿಸಿದರೆ ಅಥವಾ ಪದೀಯ ಕರ್ತವ್ಯಗಳ ನಿರ್ವಹಣೆಯಲ್ಲಿ ಕಾರ್ಯ ಮಾಡಿದನೆಂದು ತಾತ್ಪರ್ಯವಾಗುವ ಅಥವಾ ಒಂದು ನ್ಯಾಯಾಲಯವು ದೂರನ್ನು ಮಾಡಿದರೆ; ಅಥವಾ

(ಬಿ) ದಂಡಾಧಿಕಾರಿಯವರು ಪ್ರಕರಣ 192 ರ ಅಡಿ ಮತ್ತೊಬ್ಬ ದ ಂ ಡಾಧಿ ಕಾರಿಗೆ ವಿಚಾರಣೆ ಅಥವಾ ಅಧಿವಿಚಾರಣೆಗಾಗಿ ಮೊಕದ್ದಮೆಯನ್ನು ವಹಿಸಿಕೊಟ್ಟರೆ:

ಮತ್ತೂ ಪರಂತು, ಪ್ರಕರಣ 192 ರ ಅಡಿ ಒಬ್ಬ ದಂಡಾಧಿಕಾರಿಯು ಮತ್ತೊಬ್ಬ ದಂಡಾಧಿಕಾರಿಗೆ ಮೊಕದ್ದಮೆಯನ್ನು ವಹಿಸಿಕೊಟ್ಟರೆ, ದೂರುದಾರ ಮತ್ತು ಸಾಕ್ಷಿದಾರರ ವಿಚಾರಣೆ ಮಾಡಿದ ನಂತರ ನಂತರದ ದ ಂ ಡಾಧಿಕಾರಿಯು ಅವರಿಗೆ ಮರುವಿಚಾರಣೆ ಮಾಡುವ ಅವಶ್ಯಕತೆ ಇರುವುದಿಲ್ಲ.

16. ಈ ಎರಡು ಪ್ರಕರಣಗಳನ್ನು ಗಮನಿಸಿದಾಗ, ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 200 ರ ಅಡಿಯಲ್ಲಿ ಮ್ಯಾಜಿಸ್ಟ್ರೇಟರ ಮುಂದೆ ಮೊಕದ್ದಮೆಯನ್ನು ದಾಖಲಿಸಿದಾಗ ಅವರು ತನಿಖಾ ಏಜೆನ್ಸಿಯಿಂದ ಸದರಿ ಮೊಕದ್ದಮೆಯನ್ನು ತನಿಖೆ ಮಾಡಲು ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 156(3) ಅಡಿ ವಿಷಯವನ್ನು ಉಲ್ಲೇಖಿಸಲು ಮತ್ತು ಅಂತಿಮ ವರದಿಯನ್ನು ಕೊಡುವುದಕ್ಕೆ ಅವರನ್ನು ಕೇಳಲು ಅಧಿಕಾರ ಹೊಂದಿರುತ್ತಾರೆಂಬುದನ್ನು ತೋರಿಸುತ್ತದೆ ಅಥವಾ ಆತನು ಸಂಜ್ಞಾನಕ್ಕೆ ಕೂಡ ತೆಗೆದುಕೊಳ್ಳಬಹುದು ಮತ್ತು ಆತನು ಕಾನೂನಿನ ಅನುಸಾರವಾಗಿ ಸ್ವತಃ ತಾನೇ ಕ್ರಮ ತೆಗೆದುಕೊಳ್ಳಬಹುದೆಂದು ಭಾವಿಸಿದರೆ, ಆಗ ಸಿ.ಆರ್.ಪಿ.ಸಿ.ಯ ಅಧ್ಯಾಯ XVI ರ ಉಪಬಂಧಗಳ ಪ್ರಕಾರ ಆತನು ಮುಂದುವರೆಯಬಹುದು.

17. ಆದೇಶ ಪತ್ರದಿಂದ ತಿಳಿದುಬರುವಂತೆ, ಆತನು ಸಂಜ್ಞಾನವನ್ನು ತೆಗೆದುಕೊಂಡ ಮತ್ತು ತದನಂತರ ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 156(3) ರ ಅಡಿ ಆತನು ವಿಷಯವನ್ನು ಉಲ್ಲೇಖಿಸಿದ್ದಾನೆ ಎಂಬುದನ್ನು ಆತನು ಎಲ್ಲಿಯೂ ನಿರ್ದಿಷ್ಟವಾಗಿ ನಮೂದಿಸಿಲ್ಲ.ಮೊಕದ್ದಮೆಯ ಮತ್ತು ಸದರಿ ಸಂಗತಿಗಳಿಗೆ ಮತ್ತು ಸನ್ನಿವೇಶಗಳಿಗೆ ದಂಡಾಧಿಕಾರಿಯು ತನ್ನ ವಿವೇಚನೆಯನ್ನು ಅನ್ವಯಿಸಿದ್ದರೆ ಸಾಕಿತ್ತು ಎಂಬ ಸಂಗತಿ ತಿಳಿದಿದೆ.ಈ ಸಂಬಂಧ, ಕೆಳ ನ್ಯಾಯಾಲಯವು ಮೊದಲ ಅಧಿಕಾರವನ್ನು ಚಲಾಯಿಸಿದೆ ಹಾಗೂ ಡಿ.ವೈ.ಎಸ್.ಪಿ., ಭ್ರಷ್ಟಾಚಾರ ನಿಗ್ರಹ ದಳ, ಉಡುಪಿ ಅವರಿಗೆ ತನಿಖೆ ಮಾಡಿ ವರದಿಯನ್ನು ಸಲ್ಲಿಸುವಂತೆ ನಿರ್ದೇಶಿಸಿ, ಈ ವಿಷಯವನ್ನು ಅವರಿಗೆ ಕಳುಹಿಸಲು ಕ್ರಮವಹಿಸಿದೆ.ಸದರಿ ಆದೇಶದಲ್ಲಿ ಬಳಸಲಾದ ಪದಗಳು, ಮಾನ್ಯ ದಂಡಾಧಿ ಕಾರಿಗಳು, ಆಧ್ಯಾಯ XVI ರ ಅಡಿ ವ್ಯವಹರಣೆಯನ್ನು ನಡೆಸುವ ಬದಲಾಗಿ ಸಿ.ಆರ್.ಪಿ.ಸಿ.ಯ ಪ್ರಕರಣ 156 ( 3) ರ ಅಡಿ ಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ಸೂಚಿಸುತ್ತವೆ.ತನಿಖೆಯ ನಂತರವೂ, ತನಿಖಾ ಏಜೆನ್ಸಿ ವರದಿಯನ್ನು ಸಲ್ಲಿಸಿದರೆ, ಆಗ ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 173ರ ಉಪಬಂಧಗಳು ಅನ್ವಯಿಸುತ್ತವೆ ಮತ್ತು ಅದರಂತೆ ಕ್ರಮ ತೆಗೆದುಕೊಳ್ಳಲಾಗುವುದು.ವರದಿ ಮಾಡಲಾದ ಜಮುನಾ ಸಿಂಗ್ ಮತ್ತು ಇತರರು –ವಿರುದ್ಧ ಭಾದ್ - ಎ.ಐ.ಆರ್. 1964 ಎಸ್.ಸಿ. 1541, ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕಾನೂನಿನ ಈ ಪ್ರಸ್ತಾಪವನ್ನು ಸವಿಸ್ತಾರವಾಗಿ ಚರ್ಚಿಸಿದೆ.ಅದನ್ನು ಈ ಕೆಳಗಿನಂತೆ ಓದಲಾಗಿದೆ:

6. ಸಂಹಿತೆಯು " ಒಂದು ಮೊಕದ್ದಮೆ ಹೂಡುವುದು ಎಂದ ಪದಗಳ ಯಾವುದೇ ವ್ಯಾಖ್ಯಾನವನ್ನು ಒಳಗೊಂಡಿಲ್ಲ.ಅದರಲ್ಲಿ ಆಪಾದಿಸಲಾದ ಅಪರಾಧದ ಸ ಂ ಜ್ಞಾನವನ್ನು ನ್ಯಾಯಾಲಯವು ತೆಗೆದುಕೊಂಡಾಗ ಮಾತ್ರ ನ್ಯಾಯಾಲಯದಲ್ಲಿ ಅ ಒಂದು ಮೊಕದ್ದಮೆ ಹೂಡಿರುವುದಾಗಿ ಹೇಳಬಹುದು ಎಂಬುದು ನಿಜವಾಗಿಯೂ ಸ್ಪಷ್ಟವಾಗಿದ್ದು, ವಿವಾದಾತೀತವಾಗಿದೆ.ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 190 ( 1), ಮ್ಯಾಜಿಸ್ಟ್ರೇಟರು ಅಪರಾಧಗಳನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದ ಉಪಬಂಧವನ್ನು ಒಳಗೊಳ್ಳುತ್ತದೆ.ಇದನ್ನು ಮೂರು ರೀತಿಗಳಲ್ಲಿ ಉಪಬಂಧಿಸಿದ್ದು, ಅದರ ಆಧಾರದ ಮೇಲೆ ಅಂಥ ಸಂಜ್ಞಾನವನ್ನು ತೆಗೆದುಕೊಳ್ಳಬಹುದಾಗಿದೆ.ಮೊದಲನೆಯದು:ಅ ಂ ತಹ ಅಪರಾಧವು ಒಳಗೊಂಡಿರುವ ಸಂಗತಿಗಳ ಬಗ್ಗೆ ದೂರನ್ನು ಪಡೆಯುವುದರ ಮೇಲೆ, ಎರಡನೆಯದು:ಅ ಂ ತಹ ಸಂಗತಿಗಳ ಬಗ್ಗೆ ಬರಹದಲ್ಲಿ ಒಂದು ವರದಿಯನ್ನು ಎ ಂ ದರೆ, ಅಪರಾಧವನ್ನು ಒಳಗೊಂಡಿರುವ ಸಂಗತಿಗಳ ಬಗ್ಗೆ ಯಾರೇ ಪೊಲೀಸ್ ಅಧಿಕಾರಿಯು ಮಾಡಿದ ವರದಿಯ ಮೇಲೆ, ಮೂರನೆಯದು:ಪೊಲೀಸ್ ಅಧಿಕಾರಿಯನ್ನು ಹೊರತುಪಡಿಸಿ, ಯಾರೇ ವ್ಯಕ್ತಿಯಿಂದ ಪಡೆದ ಮಾಹಿತಿಯ ಮೇಲೆ ಅಥವಾ ಅಂತಹ ಅಪರಾಧ ಮಾಡಲ್ಪಟ್ಟಿದೆ ಎಂಬ ಮ್ಯಾಜಿಸ್ಟ್ರೇಟರ ಸ್ವಂತ ತಿಳಿವಳಿಕೆಯ ಮೇಲೆ ಅಥವಾ ಸಂಶಯದ ಮೇಲೆ ಆಗಿದೆ. 193 ನೇ ಪ್ರಕರಣವು ಆ ಬಗ್ಗೆ ಕ್ರಮಬದ್ಧವಾಗಿ ಅಧಿಕೃತಗೊಳಿಸಲಾದ ಒಬ್ಬ ಮ್ಯಾಜಿಸ್ಟ್ರೇಟರಿಂದ ಸತ್ರ ನ್ಯಾಯಾಲಯಗಳಿಗೆ ಒಪ್ಪಿಸಿದ ಮೇಲೆ ಅಂಥ ಸತ್ರ ನ್ಯಾಯಾಲಯಗಳು ತೆಗೆದುಕೊಳ್ಳುವ ಅಪರಾಧಗಳ ಸಂಜ್ಞಾನವನ್ನು ಉಪಬಂಧಿಸುತ್ತದೆ.194 ನೇ ಪ್ರಕರಣವು ಸಂಹಿತೆಯಲ್ಲಿ ಉಪಬ ಂ ಧಿಸಿದ ರೀತಿಯಲ್ಲಿ ಉಚ್ಚ ನ್ಯಾಯಾಲಯಕ್ಕೆ ಮಾಡಿಕೊಂಡ ಮನವಿಯ ಮೇಲೆ ಉಚ್ಚ ನ್ಯಾಯಾಲಯವು ತೆಗೆದುಕೊಂಡ ಸಂಜ್ಞಾನವನ್ನು ಉಪಬ0ಧಿಸುತ್ತದೆ.

(7) ಈ ಉಪಬಂಧಗಳ ಪರಿಶೀಲನೆಯಿ ಂ ದ ಅ ಂ ತಹ ಅಪರಾಧವನ್ನು ಒಳಗೊಂಡ ದೂರನ್ನು ಸ್ವೀಕರಿಸಿದ ಮೇಲೆ ದಂಡಾಧಿಕಾರಿಯು ಅಪರಾಧದ ಸಂಜ್ಞಾನವನ್ನು ತೆಗೆದುಕೊಂಡಾಗ, ಮ್ಯಾಜಿಸ್ಟ್ರೇಟರ

ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ಹೂಡಲಾಗಿದೆ ಮತ್ತು ಅದು ದೂರಿನ ಮೇಲೆ ಹೂಡಲಾದ ಅಂತಹ ಒಂದು ಮೊಕದ್ದಮೆಯಾಗಿದೆ ಎಂಬುದು ಸ್ಪಷ್ಟವಾಗುತ್ತದೆ.ಅಲ್ಲದೆ ಯಾರೇ ಪೊಲೀಸ್ ಅಧಿಕಾರಿಯು ಮಾಡಿದ ಅಂತಹ ಸಂಗತಿಗಳನ್ನು ಒಳಗೊಂಡ ಒಂದು ಲಿಖಿತ ವರದಿಯ ಮೇಲೆ, ಮ್ಯಾಜಿಸ್ಟ್ರೇಟರು ಯಾವುದೇ ಅಪರಾಧಗಳ ಸಂಜ್ಞಾನವನ್ನು ತೆಗೆದುಕೊ ಂ ಡಾಗ, ಇದು ಪೊಲೀಸ್ ವರದಿಯ ಮೇಲೆ ವಾಜಿಸ್ಟ್ರೇಟರ ನ್ಯಾಯಾಲಯದಲ್ಲಿ ಹೂಡಲಾದ ಮೊಕದ್ದಮೆಯಾಗಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ.

( 8) ಅಪೀಲುದಾರರು ಮೊದಲು ಖುಲಾಸೆಯಾದ ಮತ್ತು ತರುವಾಯ ಅಪರಾಧಿ ಎಂದು ನಿರ್ಣಯಿಸಿ ದೂರಿನ ಮೇಲೆ ಮೊಕದ್ದಮೆಯನ್ನು ಹೂಡಿದ್ದರೆ?ಅಥವಾ ಇಲ್ಲವೆ?ಎಂಬುದನ್ನು ನಿರ್ಧರಿಸಲು, ಉಪ ವಿಭಾಗೀಯ ಮ್ಯಾಜಿಸ್ಟ್ರೇಟರ್, ಗೋಪಾಲ್ಗಂಜ್ ಅವರ ನ್ಯಾಯಾಲಯದಲ್ಲಿ ಹೂಡಿದ್ದ ಮೊಕದ್ದಮೆಯನ್ನು 1956 ರ ನವೆಂಬರ್ 22 ರಂದು ಭಾದ್ ಷಾ ಅವರು ನ್ಯಾಯಾಲಯದಲ್ಲಿ ಹೂಡಿದ ದೂರಿನ ಮೇಲೆ ಅಥವಾ 1956 ರ ಡಿಸೆಂಬರ್ 13 ರ ಪೊಲೀಸ್ ಸಬ್ ಇನ್ಸ್ಪೆಕ್ಟರ್ ಅವರ ವರದಿಯ ಆಧಾರದ ಮೇಲೆ ಪ್ರಶ್ನಿತ ಅಪರಾಧಗಳ ಸಂಜ್ಞಾನವನ್ನು ತೆಗೆದುಕೊಂಡಿದ್ದರೆ?ಎಂಬುದನ್ನು ಕಂಡುಹಿಡಿಯುವುದು ಅವಶ್ಯಕ. ಮ್ಯಾಜಿಸ್ಟ್ರೇಟರ ಮುಂದೆ ದೂರಿನ ಅರ್ಜಿಯನ್ನು ಸಲ್ಲಿಸಿದಾಗ, ದಂಡ ಪ್ರಕ್ರಿಯಾ ಸಂಹಿತೆಯ ಅಧ್ಯಾಯ XVI ರ ವಿವಿಧ ಉಪಬಂಧಗಳ ಅಡಿ ಕ್ರಮ ಜರುಗಿಸಲು ಮ್ಯಾಜಿಸ್ಟ್ರೇಟರು ತಮ್ಮ ವಿವೇಚನೆಯನ್ನು ಅನ್ವಯಿಸಿದಾಗ, ಅವರು ದೂರಿನಲ್ಲಿ ಪ್ರಸ್ತಾಪಿಸಿದ ಅಪರಾಧಗಳ ಸಂಜ್ಞಾನವನ್ನು ತೆಗೆದುಕೊಂಡಿರುವುದಾಗಿ ತೀರ್ಮಾನಿಸಬೇಕು ಎಂಬುದು ಈಗ ಸುಸ್ಥಾಪಿತವಾಗಿದೆ.ಹಾಗಿದ್ದರೂ ಅವರು ತಮ್ಮ ವಿವೇಚನೆಯನ್ನು ಆ ಉದ್ದೇಶಕ್ಕಾಗಿ ಅನ್ವಯಿಸಿದೆ, 156 ( 3) ನೇ ಪ್ರಕರಣದ ಅಡಿ ತನಿಖೆಯನ್ನು ಆದೇಶಿಸುವ ಉದ್ದೇಶಗಳಿಗಾಗಿ ಆಗಿದ್ದಾಗ ಅಥವಾ ತನಿಖೆಯ ಉದ್ದೇಶಕ್ಕಾಗಿ ಶೋಧನಾ ವಾರಂಟು ಜಾರಿಗೊಳಿಸುವ ಉದ್ದೇಶಕ್ಕಾಗಿ ಆಗಿದ್ದಾಗ ಯಾವುದೇ ಅಪರಾಧದ ಸಂಜ್ಞಾನವನ್ನು ಅವರು ತೆಗೆದುಕೊಂಡಿರುವುದಾಗಿ ಹೇಳಲಾಗದು.ಆರ್.ಆರ್. ಚಾರಿ -ವಿರುದ್ಧ- ಯು.ಪಿ.ರಾಜ್ಯ 1951 ಎಸ್ಸಿಆರ್ 312:(ಎಐಆರ್ 1951 ಎಸ್ಸಿ 207) ಮತ್ತು ಪುನಃ ಗೋಪಾಲ್ ದಾಸ್ -ವಿರುದ್ಧ- ಅಸ್ಸಾಂ ರಾಜ್ಯ, ಎಐಆರ್ 1961 ಎಸ್ 986 ಪ್ರಕರಣಗಳಲ್ಲಿ ಈ ನ್ಯಾಯಾಲಯವು ಅದೇ ರೀತಿಯ ಅ ಅಭಿಪ್ರಾಯವನ್ನು ಪಟ್ಟಿರುತ್ತದೆ.

(9) ನಮ್ಮ ಮುಂದಿರುವ ಈ ಮೊಕದ್ದಮೆಯಲ್ಲಿ, ಮ್ಯಾಜಿಸ್ಟ್ರೇಟರು ಭಾದ್ಯೆ-ಷಾರ ಮೊಕದ್ದಮೆಯನ್ನು ಸ್ವೀಕರಿಸಿದ ನಂತರ, ದಂಡ ಪ್ರಕ್ರಿಯಾ ಸಂಹಿತೆಯ 200 ನೇ ಪ್ರಕರಣದ ಅಡಿಯಲ್ಲಿ ಅವರ ವಿಚಾರಣೆಗೆ ಮುಂದಾದರು.ಆ ಪ್ರಕರಣವು, ಮ್ಯಾಜಿಸ್ಟ್ರೇಟರು ದೂರಿನ ಮೇಲೆ ಅಪರಾಧದ ಸಂಜ್ಞಾನವನ್ನು ತೆಗೆದುಕೊಂಡು, ದೂರುದಾರನನ್ನು ಮತ್ತು ಹಾಜರಿರುವ ಸಾಕ್ಷಿದಾರರು ಯಾರಾದರೂ ಇದ್ದಲ್ಲಿ, ಅವರನ್ನು ಪ್ರಮಾಣವಚನ ತೆಗೆದುಕೊಂಡು ಕೂಡಲೇ ವಿಚಾರಣೆ ನಡೆಸತಕ್ಕದ್ದು ಎಂದು ಸ್ಪಷ್ಟಪಡಿಸುತ್ತದೆ.ಪ್ರಕರಣ 200 ರ ಅಡಿಯಲ್ಲಿ ಮ್ಯಾಜಿಸ್ಟ್ರೇಟರು ನಡೆಸುವ ವಿಚಾರಣೆಯು ದೂರಿನಲ್ಲಿ ಪ್ರಸ್ತಾಪಿಸಿದ ಅಪರಾಧಗಳ ಸಂಜ್ಞಾನವನ್ನು ಮ್ಯಾಜಿಸ್ಟ್ರೇಟರು ತೆಗೆದುಕೊಂಡಿದ್ದರು ಎಂಬ ಅನುಮಾನ ಇಲ್ಲದಂತೆ ಮಾಡಿದೆ.ವಿಚಾರಣೆಯನ್ನು ಮುಗಿಸಿದ ನಂತರ ಮತ್ತು ಪ್ರಕರಣ 200 ರಡಿ ಅಗತ್ಯಪಡಿಸಲಾದಂತೆ, ಅದರ ಸಾರಾಂಶವನ್ನು ಬರಹದಲ್ಲಿ ದಾಖಲಿಸಿದ ನಂತರ, ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 204 ರ ಅಡಿ ಮ್ಯಾಜಿಸ್ಟ್ರೇಟರು ಕೂಡಲೇ ಪ್ರಕ್ರಿಯೆಯನ್ನು ಹೊರಡಿಸಬಹುದಾಗಿತ್ತು ಅಥವಾ ದಂಡ ಪ್ರಕ್ರಿಯಾ ಸ ಂ ಹಿತೆಯ ಪ್ರಕರಣ 203 ರ ಅಡಿ ಮೊಕದ್ದಮೆಯನ್ನು ವಜಾಗೊಳಿಸಬಹುದಾಗಿತ್ತು ಅಥವಾ ಈ ಎರಡೂ ಕ್ರಮಗಳನ್ನು ಕೈಗೊಳ್ಳುವ ಮುಂಚೆ ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 202 ರ ಅಡಿಯಲ್ಲಿ ಕ್ರಮ ಕೈಗೊಳ್ಳಲು ಅವರಿಗೆ ಅವಕಾಶವಿತ್ತು.ಆ ಪ್ರಕರಣದ ಅಡಿಯಲ್ಲಿ ದೂರುಕೊಟ್ಟ ವ್ಯಕ್ತಿಗಳ ವಿರುದ್ಧದ ಹಾಜರಾತಿಯನ್ನು ಅಗತ್ಯಪಡಿಸುವ ಕಾರ್ಯವಿಧಾನದ ವಿವಾದಾಂಶವನ್ನು ಮುಂದೂಡಲು ಮ್ಯಾಜಿಸ್ಟ್ರೇಟರಿಗೆ ಅಧಿಕಾರವಿರುತ್ತದೆ ಮತ್ತು ಸ್ವತಃ ತಾನೇ ಆ ಮೊಕದ್ದಮೆಯನ್ನು ವಿಚಾರಣೆ ಮಾಡಬಹುದು ಅಥವಾ ಅವರು 3 ನೇ ದರ್ಜೆಯ ಮ್ಯಾಜಿಸ್ಟ್ರೇಟರನ್ನು ಹೊರತುಪಡಿಸಿ ಮ್ಯಾಜಿಸ್ಟ್ರೇಟ್ ಆಗಿದ್ದರೆ ಅವರಿಗೆ ಅಧೀನವಾಗಿರುವ ಯಾರೇ ಮ್ಯಾಜಿಸ್ಟ್ರೇಟರಿಂದ ಅಥವಾ ಪೊಲೀಸ್ ಅಧಿಕಾರಿಯಿಂದ ಅಥವಾ ದೂರಿನ ಸತ್ಯಾಸತ್ಯತೆಯನ್ನು ಖಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ ತಾನು ಸೂಕ್ತವೆಂದು ಭಾವಿಸುವಂಥ ಇತರ ವ್ಯಕ್ತಿಯಿಂದ ವಿಚಾರಣೆ ಅಥವಾ ತನಿಖೆಯನ್ನು ಮಾಡಬೇಕೆಂದು ನಿರ್ದೇಶಿಸಬಹುದು.ಅಂಥ ತನಿಖೆ ಅಥವಾ ವಿಚಾರಣೆಯನ್ನು ಆದೇಶಿಸಿದ್ದರೆ ಮತ್ತು ಆದೇಶಿಸಿದ್ದಾಗ ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 203 ರ ಅಡಿಯಲ್ಲಿ ಮ್ಯಾಜಿಸ್ಟ್ರೇಟರು ಯಾವುದೇ ಕ್ರಮವನ್ನು ತೆಗೆದುಕೊಳ್ಳುವ ಮೊದಲು, ಆ ತನಿಖೆ ಅಥವಾ ವಿಚಾರಣೆಯ ಫಲಿತಾಂಶವನ್ನು ಪರಿಗಣಿಸಬೇಕಾಗುತ್ತದೆ.

(10) ನಮ್ಮ ಮುಂದಿರುವ ಮೊಕದ್ದಮೆಯಲ್ಲಿ ಮ್ಯಾಜಿಸ್ಟ್ರೇಟರು ದ ಂ ಡ ಪ್ರಕ್ರಿಯಾ ಸ ಂ ಹಿತೆಯ ಪ್ರಕರಣ 200 ರ ಅಡಿ ಪರಿಶೀಲನೆಯನ್ನು ಪೂರ್ಣಗೊಳಿಸಿ ಅದರ ಸಾರಾಂಶವನ್ನು ದಾಖಲಿಸಿದ ನಂತರ ಈ ಪದಗಳಲ್ಲಿ ಆದೇಶವನ್ನು ಮಾಡಿರುವುದು ತಿಳಿದುಬರುತ್ತದೆ.

"ಎಸ್.ಎ. ಮೇಲೆ ದೂರನ್ನು ಪರಿಶೀಲಿಸಲಾಗಿದೆ.ಅಪರಾಧವು ಸಂಜ್ಞೇಯವಾದದ್ದಾಗಿದೆ ಮತ್ತು ಒಂದು ಮೊಕದ್ದಮೆಯನ್ನು ಹೂಡುವುದಕ್ಕಾಗಿ ಮತ್ತು 12.12.56 ರೊಳಗೆ ವರದಿ ನೀಡುವುದಕ್ಕಾಗಿ ಎಸ್.ಐ.ಬೈಕುಂತಪುರ್ಗೆ "

ಮಾನ್ಯ ಮ್ಯಾಜಿಸ್ಟ್ರೇಟರು " ಮೊಕದ್ದಮೆಯನ್ನು ಹೂಡುವುದಕ್ಕಾಗಿ " ಎಂಬ ಪದಗಳಿಗೆ ಬದಲಾಗಿ ' ತನಿಖೆಗಾಗಿ ' ಎಂಬ ಪದವನ್ನು ಬಳಸಿದ್ದರೆ, ಆ ಆದೇಶವು ಸ್ಪಷ್ಟವಾಗಿ ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 202 ರ ಅಡಿ ಹೊರಡಿಸುವುದಾಗಿರುತ್ತಿತ್ತು.ಮಾನ್ಯ ಮ್ಯಾಜಿಸ್ಟ್ರೇಟರು ' ಮೊಕದ್ದಮೆಯನ್ನು ಹೂಡುವುದಕ್ಕಾಗಿ ' ಪದವನ್ನು ಬಳಸಿರುವುದರಿಂದ ಯಾವುದೇ ವ್ಯತ್ಯಾಸವಾಗುತ್ತದೆ ಎಂಬ ಸಂಗತಿಯನ್ನು ನಾವು ಆಲೋಚಿಸುವುದಿಲ್ಲ.ಮ್ಯಾಜಿಸ್ಟ್ರೇಟರು ದೂರನ್ನು ಸ್ವೀಕರಿಸಿದ ಮೇಲೆ ಅಪರಾಧಗಳ ಸಂಜ್ಞಾನವನ್ನು ತೆಗೆದುಕೊಳ್ಳಲು ಬದ್ಧರಾಗಿಲ್ಲ ಎಂಬುದನ್ನು ಗಮನಿಸಬೇಕಾಗಿದೆ.ಅವರು ಸಂಜ್ಞಾನವನ್ನು ತೆಗೆದುಕೊಳ್ಳದೆ, ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 156 ( 3) ರ ಅಡಿಯಲ್ಲಿ ಪೊಲೀಸರಿಂದ ಮೊಕದ್ದಮೆಯ ತನಿಖೆಗೆ ನಿರ್ದೇಶಿಸಿರಬಹುದಾಗಿತ್ತು.ಆದಾಗ್ಯೂ, ಅವರು ಒಮ್ಮೆ ಸಂಜ್ಞಾನವನ್ನು ತೆಗೆದುಕೊಂಡಿದ್ದರೂ, ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 202 ರ ಅಡಿಯಲ್ಲಿ ಮಾತ್ರ ಪೊಲೀಸರಿಂದ ತನಿಖೆಗೆ ಅವರು ಆದೇಶಿಸಬಹುದಿತ್ತೇ ಹೊರತು, ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 156 ( 3) ರ ಅಡಿ ಅಲ್ಲ. ದೂರಿನಲ್ಲಿ ಹೇಳಲಾದ ಅಪರಾಧಗಳ ಸಂಜ್ಞಾನವನ್ನು ಅವರು ತೆಗೆದುಕೊಂಡಿದ್ದಾರೆ ಎಂಬುದು ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 200 ರ ಅಡಿ ಅವರು ಕ್ರಮವನ್ನು ಕೈಗೊಂಡಿದ್ದಾರೆ ಎಂಬ ಆ ಸಂಗತಿಯಿಂದ ಇಲ್ಲಿ ಸ್ಪಷ್ಟವಾಗಿರುವುದರಿಂದ, ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 202 ರ ಅಡಿ ಮಾತ್ರ ತನಿಖೆಗೆ ಅವರು ಆದೇಶಿಸಲು ಮುಕ್ತರಾಗಿದ್ದ ಹೊರತು, ಸಂಹಿತೆಯ ಪ್ರಕರಣ 156 ( 3) ರ ಅಡಿಯಲ್ಲಿ ಅಲ್ಲ. ಮ್ಯಾಜಿಸ್ಟ್ರೇಟರು 22 ನೇ ನವೆಂಬರ್ 1956 ರ ಈ ಆದೇಶದಲ್ಲಿ ಮೊಕದ್ದಮೆಯನ್ನು ಹೂಡುವುದಕ್ಕಾಗಿ ' ಪದಗಳನ್ನು ಉಪಯೋಗಿಸಿದ್ದರೂ, ಕಾನೂನಿನಲ್ಲಿ ಅವರು ಕಾರ್ಯನಿರ್ವಹಿಸಲು ಹಕ್ಕುಳ್ಳ ಏಕಮಾತ್ರ ಪ್ರಕರಣ ದಂಡ ಪ್ರಕ್ರಿಯಾ ಸಂಹಿತೆಯ 202 ನೇ ಪ್ರಕರಣವಾಗಿದ್ದು, ಅವರು ವಾಸ್ತವವಾಗಿ ಅದರ ಅಡಿಯಲ್ಲಿ ಕ್ರಮ ತೆಗೆದುಕೊಂಡಿದ್ದರು ಎ ಂ ದು ತೀರ್ಮಾನಿಸುವುದು ಈ ಸನ್ನಿವೇಶಗಳಲ್ಲಿ ಸೂಕ್ತವಾಗಿರುತ್ತದೆ.

(11) ದೂರಿನ ಅರ್ಜಿಯ ಪ್ರತಿಯನ್ನು ಪ್ರಥಮ ಮಾಹಿತಿ ವರದಿಯಾಗಿ ಪೊಲೀಸ್ ಸಬ್-ಇನ್ಸ್ ಪೆಕ್ಟರ್ ಪರಿಗಣಿಸಿದ್ದರು ಮತ್ತು ಆರೋಪಿತ ವ್ಯಕ್ತಿಗಳ ವಿರುದ್ಧ ದೋಷಾರೋಪಣ ಪಟ್ಟಿ ' ಸಲ್ಲಿಸಿದ್ದರೆಂಬ ಸ ಂ ಗತಿಯು ಯಾವುದೇ ವ್ಯತ್ಯಾಸವನ್ನು ಮಾಡುವುದಿಲ್ಲ.22 ನೇ ನವೆಂಬರ್ 1956 ರಂದು ಮ್ಯಾಜಿಸ್ಟ್ರೇಟರು ಜಾರಿಗೊಳಿಸಿದ ಆದೇಶವನ್ನು ನಾವು ತೆಗೆದುಕೊಂಡ ಹಿನ್ನೆಲೆಯಲ್ಲಿ, ಪೊಲೀಸ್ ಅಧಿಕಾರಿಯು ಮಾಡಿದ ವರದಿಯು ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 173 ರ ಅಡಿಯಲ್ಲಿನ ವರದಿಯೆಂದು ತಾತ್ಪರ್ಯವಾದರೂ ಅದನ್ನು ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 202 ರ ಅಡಿಯಲ್ಲಿನ ವರದಿಯೆಂಬುದಾಗಿ ಕಾನೂನಿನಲ್ಲಿ ಪರಿಗಣಿಸತಕ್ಕದ್ದು.

(12) ಪೊಲೀಸ್ ಅಧಿಕಾರಿಯ ವರದಿಯ ಮೇಲೆ ಮ್ಯಾಜಿಸ್ಟ್ರೇಟರು ಸಂಜ್ಞಾನವನ್ನು ತೆಗೆದುಕೊಂಡಿರಬಹುದು ಎಂದು ಸಂಹಿತೆಯ ಪ್ರಕರಣ 190 ರ ಉಪಬಂಧಗಳನ್ನು ಆಧರಿಸಿ, ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ಮ್ಯಾಜಿಸ್ಟ್ರೇಟರುದಿನಾಂಕ: 22.11.1956 ರ ಆದೇಶವನ್ನು ಮಾಡಿದಾಗ, ಅವರ ಉದ್ದೇಶವು, ಪೊಲೀಸ್ ಅಧಿಕಾರಿಯ ವರದಿಯನ್ನು ಸ್ವೀಕರಿಸಿದ ನಂತರ ಮಾತ್ರವೇ ಸಂಜ್ಞಾನವನ್ನು ಅವರು ತೆಗೆದುಕೊಳ್ಳುತ್ತಾರೆಂಬ ಆಶಯವಿತ್ತು ಮತ್ತು 13 ನೇ ಡಿಸೆಂಬರ್ 1956 ರ ನಂತರ ಸಂಹಿತೆಯ ಪ್ರಕರಣ 173 ರ ಅಡಿ ದೋಷಾರೋಪಣ ಪಟ್ಟಿಯ ರೂಪದಲ್ಲಿ ಆ ವರದಿಯನ್ನು ವಾಸ್ತವಿಕವಾಗಿ ಸ್ವೀಕರಿಸಿದ ನಂತರ ಮಾತ್ರವೇ ಸಂಜ್ಞಾನವನ್ನು ತೆಗೆದುಕೊಂಡಿರುವುದಾಗಿ ತೀರ್ಮಾನಿಸಬೇಕಿದೆ ಎಂದು ವಾದಿಸಿದ್ದಾರೆ.

ಆದಾಗ್ಯೂ, ಈ ವಾದದ ರೀತಿಯಲ್ಲಿನ ದುಸ್ತರವಾದ ಕಷ್ಟವು ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 200 ರ ಅಡಿ ಮ್ಯಾಜಿಸ್ಟ್ರೇಟರು ಈಗಾಗಲೇ ದೂರುದಾರರನ್ನು ವಿಚಾರಣೆ ಮಾಡಿದ್ದಾರೆ ಎಂಬ ಸಂಗತಿಯಾಗಿದೆ.ಅವರು ಸಂಜ್ಞಾನವನ್ನು ತೆಗೆದುಕೊಂಡಿದ್ದರು ಮತ್ತು ಈ ಕ್ರಮದ ಆಧಾರದ ಮೇಲೆಯೇ ಒಂದು ದಾವೆಯನ್ನು ಹೂಡುವುದಕೋಸ್ಕರ ' ಮತ್ತು 12.12.56 ರೊಳಗೆ ವರದಿ ಸಲ್ಲಿಸುವಂತೆ ಸಬ್ ಇನ್ಸ್ಪೆಕ್ಟರ್, ಬೈಕುಂತಪುರ್ಗೆ

ಇವರಿಗೆ ಆದೇಶವನ್ನು ಮಾಡಿದಾಗ, ಈಗಾಗಲೇ ಸಂಜ್ಞಾನವನ್ನು ತೆಗೆದುಕೊಂಡಿಲ್ಲ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ ಎಂಬ ಆಧಾರದ ಮೇಲೆ ಆ ವಿಚಾರಣೆಯನ್ನು ಮುಂದುವರಿಸಿದ್ದರು."

(13) ಅವರು ಆದೇಶವನ್ನು ಮಾಡುವುದಕ್ಕೆ ಮುಂಚೆ ಮ್ಯಾಜಿಸ್ಟ್ರೇಟರು ಸಂಜ್ಞಾನವನ್ನು ಈಗಾಗಲೇ ತೆಗೆದುಕೊಂಡಾಗಿದ್ದು, ಪೊಲೀಸ್ ಅಧಿಕಾರಿಯ ವರದಿಯನ್ನು ಸ್ವೀಕರಿಸಿದ ನಂತರ, ಅದೇ ಅಪರಾಧಕ್ಕೆ ಹೊಸದಾಗಿ ಸ ಂ ಜ್ಞಾನ ವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ.ಆದ್ದರಿಂದ ಭಾದ್ ಷಾ ರ ದೂರಿನ ಮೇರೆಗೆ ಮೊಕದ್ದಮೆಯನ್ನು 22 ನೇ ನವೆಂಬರ್ 1956 ರಂದು ಹೂಡಲಾಗಿತ್ತೆ ಹೊರತು ಪೊಲೀಸ್ ಸಬ್ ಇನ್ಸ್ಪೆಕ್ಟರ್ ಬೈಕುಂತಪುರ್ ನಂತರ ಸಲ್ಲಿಸಿದ ಪೊಲೀಸ್ ವರದಿಯ ಮೇಲಲ್ಲ ಎಂಬ ನಿರ್ಣಯದಿಂದ ತಪ್ಪಿಸಿಕೊಳ್ಳಲಾಗದು.ಆದ್ದರಿಂದ ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 417 ( 3) ರ ಅಡಿಯಲ್ಲಿ ಅಪೀಲು ಬರುವುದಿಲ್ಲ ಎಂಬ ವಾದವನ್ನು ತಿರಸ್ಕರಿಸಬೇಕು.

(14) ಅಪೀಲುದಾರರ ಪರವಾಗಿ ಎತ್ತಲಾದ ಮು ಂ ದಿನ ವಾದಾ ಂ ಶವೆ ಂ ದರೆ, ಉಚ್ಚ ನ್ಯಾಯಾಲಯವು ಮಾನ್ಯ ಸಹಾಯಕ ಸೆಷನ್ಸ್ ನ್ಯಾಯಾಧೀಶರು ಜಾರಿಗೊಳಿಸಿದ ಖುಲಾಸೆ ಆದೇಶದಲ್ಲಿ ಮಧ್ಯೆ ಪ್ರವೇಶಿಸುವುದು ಸಮರ್ಥನೀಯವಲ್ಲ.ಯಾವ ಕಾರಣದ ಮೇಲೆ ಮಾನ್ಯ ಸಹಾಯಕ ಸೆಷನ್ಸ್ ನ್ಯಾಯಾಧೀಶರು ಪ್ರಾಸಿಕ್ಯೂಷನ್ ಸಾಕ್ಷಿದಾರರ ಸಾಕ್ಷ್ಯವನ್ನು ತಿರಸ್ಕರಿಸಿದ್ದಾರೆ ಮತ್ತು ನಮ್ಮ ಮುಂದೆ ಇಟ್ಟಿರುವ ಸಾಕ್ಷ್ಯದ ವಿಶ್ವಾಸಾರ್ಹತೆಯನ್ನು ನಿರ್ಧರಿಸುವುದಕ್ಕೆ ಮಾನ್ಯ ಸೆಷನ್ಸ್ ನ್ಯಾಯಾಧೀಶರು, ಸರಿಯಾಗಿ ಪ್ರಯತ್ನಿಸಲಿಲ್ಲ ಎಂದು ಉಚ್ಚ ನ್ಯಾಯಾಲಯದ ಮಾನ್ಯ ನ್ಯಾಯಾಧೀಶರು ಯಾವ ಕಾರಣಗಳಿಗಾಗಿ ಅಭಿಪ್ರಾಯಪಟ್ಟಿದ್ದರು ಎಂಬುದಾಗಿದೆ.ಉಚ್ಚ ನ್ಯಾಯಾಲಯವು ಆ ವಿಷಯವನ್ನು ಸಂಪೂರ್ಣವಾಗಿ ಮತ್ತು ಎಚ್ಚರಿಕೆಯಿಂದ ಪರಿಶೀಲಿಸಿದೆ ಮತ್ತು ಸಾಕ್ಷ್ಯವನ್ನು ವಿವರವಾಗಿ ಪರಿಶೀಲಿಸಿದ ಮೇಲೆ ಸಾಕ್ಷ್ಯದ ನಿರ್ಧರಣೆಯಿಂದಾಗಿ ನ್ಯಾಯದ ಗಂಭೀರ ವಿಫಲತೆ ಉಂಟಾಗಿದೆ ಎಂಬ ತೀರ್ಮಾನಕ್ಕೆ ಬಂದಿದೆ.ಖುಲಾಸೆ ಆದೇಶಗಳಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ಸಂಬಂಧಿಸಿದಂತೆ, ಸರಣಿ ಮೊಕದ್ದಮೆಗಳಲ್ಲಿ ಈ ನ್ಯಾಯಾಲಯವು ವಿಧಿಸುವ ನಿಯಮಗಳನ್ನು ಉಚ್ಚ ನ್ಯಾಯಾಲಯವು ಸರಿಯಾಗಿಯೇ ಚ ಅನುಸರಿಸಿದೆ.ಆದ್ದರಿಂದ, ನಮ್ಮಷ್ಟಕ್ಕೆ ನಾವು ಸಾಕ್ಷ್ಯವನ್ನು ಪುನರ್ ನಿರ್ಧರಣೆ ಮಾಡುವಲ್ಲಿ ನಮ್ಮನ್ನು ಸಮರ್ಥಿಸಿಕೊಳ್ಳುವುದು ಏನೂ ಇರುವುದಿಲ್ಲ.ಹಾಗಿದ್ದರೂ, ನಮ್ಮ ಮುಂದೆ ಇಟ್ಟಿರುವ ಸಾಕ್ಷ್ಯದ ಸಮ ಂ ಜಸವಾದ ಭಾಗಗಳಾಗಿ, ಅಂತಹ ಸಾಕ್ಷ್ಯವನ್ನು ಪರಿಗಣಿಸಿದ ಮೇಲೆ ಉಚ್ಚ ನ್ಯಾಯಾಲಯದ ತೀರ್ಪು ಸರಿಯಾಗಿದೆ ಎಂದು ನಮಗೆ ಮನವರಿಕೆಯಾಗಿದೆ ಎಂದು ಹೇಳುವುದು ನಮಗೆ ಸೂಕ್ತವೆನಿಸುತ್ತದೆ.

(15) ಕೊನೆಯದಾಗಿ, ಅಪೀಲುದಾರರ ಪರ ಮಾನ್ಯ ನ್ಯಾಯವಾದಿಯು ಮ್ಯಾಜಿಸ್ಟ್ರೇಟರು ಒಂದು ಮೊಕದ್ದಮೆಯನ್ನು ಹೂಡಲು ಪೊಲೀಸರನ್ನು ಕೇಳುವಾಗ ನ್ಯಾಯವ್ಯಾಪ್ತಿಯಿಲ್ಲದೆ ನಡೆದುಕೊಂಡಿದ್ದರು.ಆದ್ದರಿಂದ, ಆ ಆದೇಶದ ತರುವಾಯದ ಎಲ್ಲಾ ವ್ಯವಹರಣೆಗಳು ಅನೂರ್ಜಿತವಾಗಿದ್ದವು ಎಂದು ವಾದಿಸಿದ್ದಾರೆ.ನಾವು ಈಗಾಗಲೇ ಗಮನಿಸಿದಂತೆ ಮತ್ತು ಮೊಕದ್ದಮೆಯನ್ನು ಹೂಡುವಂತೆ ಮತ್ತು ಒಂದು ವರದಿಯನ್ನು ಕಳುಹಿಸುವಂತೆ ಪೊಲೀಸರನ್ನು ಕೇಳುವ ದಂಡಾಧಿಕಾರಿಯವರ ಆದೇಶವನ್ನು ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 202 ರ ಅಡಿಯಲ್ಲಿ ಮಾಡಿದಂತೆ ಸರಿಯಾಗಿ ಮತ್ತು ಯುಕ್ತವಾಗಿ ಓದಬೇಕು.ಆದ್ದರಿಂದ, ಮಾನ್ಯ ಮ್ಯಾಜಿಸ್ಟ್ರೇಟರು ನ್ಯಾಯವ್ಯಾಪ್ತಿಯಿಲ್ಲದೆ ವರ್ತಿಸಿದ್ದಾರೆ ಎಂಬ ವಾದವನ್ನು ಒಪ್ಪಲಾಗದು.ಹೆಚ್ಚೆಂದರೆ, ಮಾನ್ಯ ಮ್ಯಾಜಿಸ್ಟ್ರೇಟರು ದಾವೆಯನ್ನು ಹೂಡಲು ಪೊಲೀಸರನ್ನು ಕೇಳುವಷ್ಟರಮಟ್ಟಿಗೆ ಅವನು ಅಕ್ರಮವಾಗಿ ನಡೆದುಕೊಂಡಿದ್ದಾನೆ ಎಂದು ಹೇಳಬಹುದು.ಆದಾಗ್ಯೂ, ಅಕ್ರಮತೆಯು ಯಾವುದೇ ನ್ಯಾಯವಿಫಲತೆಗೆ ಕಾರಣವಾಗಿದೆ ಎಂದು ಆಲೋಚಿಸಲು ಯಾವುದೇ ಕಾರಣವಿಲ್ಲ.ಉಚ್ಚ ನ್ಯಾಯಾಲಯವು ಹೊರಡಿಸಿದ ಅಪರಾಧ ನಿರ್ಣಯದ ಆದೇಶ ಅಥವಾ ಶಿಕ್ಷೆಯನ್ನು ಆ ಕ್ರಮದೋಷವಿದೆ ಎಂಬ ಕಾರಣದ ಮೇಲೆ ವಿಪರ್ಯಯಗೊಳಿಸಲು ಅಥವಾ ವ್ಯತ್ಯಾಸಗೊಳಿಸಲು ಸಾಧ್ಯವಿಲ್ಲ.99

18. ಮೇಲೆ ಉಲ್ಲೇಖಿಸಿದ ಸದರಿ ತೀರ್ಪಿನಲ್ಲಿ, ಪೊಲೀಸರಿಗೆ ದೂರನ್ನು ಹೂಡಲು ಮತ್ತು ವರದಿಯನ್ನು ಕಳುಹಿಸಲು ನಿರ್ದೇಶಿಸುವ ಮಾನ್ಯ ಮ್ಯಾಜಿಸ್ಟ್ರೇಟರ ಆದೇಶವನ್ನು ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 202 ರ ಅಡಿಯಲ್ಲಿ ಮಾಡಿದಂತೆ ಸೂಕ್ತವಾಗಿ ಮತ್ತು ಯುಕ್ತವಾಗಿ ಓದಬೇಕು ಎಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ನಿರ್ದಿಷ್ಟವಾಗಿ ಅಭಿಪ್ರಾಯಪಟ್ಟಿದೆ.ಈ ಹಿನ್ನೆಲೆಯಲ್ಲಿ, ಮ್ಯಾಜಿಸ್ಟ್ರೇಟರು ತಮ್ಮ

ವಿವೇಚನೆಯನ್ನು ಬಳಸಿದ್ದರು ಮತ್ತು ಸಂಜ್ಞಾನವನ್ನು ತೆಗೆದುಕೊಂಡಿದ್ದರು ಎಂದು ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಯವರು ಮಾಡಿದ ವಾದಗಳನ್ನು ಒಪ್ಪಲಾಗದು.ಆದೇಶ ಪತ್ರದಲ್ಲಿ ಪ್ರಸ್ತಾಪಿಸಿದ ಸದರಿ ಸಂಗತಿಗಳು ಮತ್ತು ತದನಂತರ, ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 156(3) ರ ಅಡಿ ತನಿಖೆಗೆ ಸೂಚಿಸಿ ಆದೇಶ ಹೊರಡಿಸಿರುವುದು, ನ್ಯಾಯದ ವಿಫಲತೆಗೆ ಕಾರಣವಾಗುವ ಹಾಗೆ ಮೇಲೆ ಸೂಚಿಸಲಾದಂತೆ ಕೇವಲ ಕ್ರಮದೋಷವಾಗಿದೆಯೇ ಹೊರತು ಕಾನೂನು ಬಾಹಿರತೆ ಅಲ್ಲ ಎಂಬುದನ್ನು ಸಂಗತಿಗಳು ಮತ್ತು ಆದೇಶ ಸ್ಪಷ್ಟವಾಗಿ ತೋರಿಸುತ್ತವೆ.

19. ಅದು ಹೇಗಿದೆಯೋ ಹಾಗೆ, ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 200 ರ ಅಡಿಯಲ್ಲಿ ದೂರು ದಾಖಲಿಸಿದಾಗ, ಅವರಿಗಾಗಿ ಎರಡು ಆಯ್ಕೆಗಳು ಮುಕ್ತವಾಗಿದ್ದವು ಮತ್ತು ಅವರು ಮೊದಲು ತಮ್ಮ ವಿವೇಚನೆಯನ್ನು ಬಳಸಿದಲ್ಲಿ ಮತ್ತು ಆ ನಂತರ ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 156 ( 3) ರ ಅಡಿಯಲ್ಲಿ ಅವರು ಪೊಲೀಸರಿಗೆ ತನಿಖೆಗೆ ನಿರ್ದೇಶಿಸಿದಲ್ಲಿ, ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 202 ರಂತೆ, ಈ ವಿಷಯದಲ್ಲಿ ಅವರು ಸ್ವತಃ ಮುಂದುವರೆಯಲು ಉದ್ದೇಶಿಸಿರಲಿಲ್ಲ ಎಂಬ ಸಂಗತಿಯನ್ನು ತೋರಿಸುತ್ತದೆ ಮತ್ತು ಅವರು ತನಿಖಾ ಏಜೆನ್ಸಿಯಿಂದ ವರದಿಯನ್ನು ಪಡೆಯಬೇಕು ಎಂಬವುಗಳು ಕಾನೂನಿನ ಸುಸ್ಥಾಪಿತವಾದ ನಿಯಮಗಳಾಗಿವೆ.ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 156(3) ರ ಅಡಿ ಆದೇಶವನ್ನು ಒಂದು ಬಾರಿ ಜಾರಿಗೊಳಿಸಿದಾಗ ಮತ್ತು ಅಂತಹ ಸಂದರ್ಭದಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 200 ರ ಅಡಿ ಅವರು ಅಧಿಕಾರ ಚಲಾಯಿಸಲು ಹಿಂತೆಗೆಯುವಂತಿಲ್ಲ.ದಂಡ ಪ್ರಕ್ರಿಯಾ ಸಂಹಿತೆಯ ಅಧ್ಯಾಯ XVI ರಲ್ಲಿ ಒಳಗೊಂಡ ಉಪಬಂಧಗಳಿಗನುಸಾರವಾಗಿ ಮಾತ್ರ ಮುಂದುವರೆಯಲು ಅವರನ್ನು ಅಗತ್ಯಪಡಿಸಲಾಯಿತು.ಅವರು ಹಳೆಯ ವಿಚಾರಗಳತ್ತ ಗಮನಹರಿಸಲಾಗಲಿಲ್ಲ.ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 156 ( 3) ರ ಅಡಿ ಚಲಾಯಿಸಿದ ಅಧಿಕಾರವು ಪೂರ್ವ ಸಂಜ್ಞಾನದ ಅವಧಿಯಾಗಿರುತ್ತದೆ.ಆದ್ದರಿಂದ, ಮ್ಯಾಜಿಸ್ಟ್ರೇಟರಿಗಿದ್ದ ಅಧಿಕಾರ ವ್ಯಾಪ್ತಿಯೊಳಗೆ ಅಧಿಕಾರ ಚಲಾಯಿಸಲಾಗಿದೆ ಎಂಬುದನ್ನು ದೂರುಗಳ ಆಧಾರದ ಮೇಲೆ ತನಿಖೆಗೆ ನಿರ್ದೇಶಿಸಿ,ದಿನಾಂಕ: 02.11.2016 ಮತ್ತು 25.01.2017 ರಂದು ಹೊರಡಿಸಿದ ಆದೇಶಗಳು ಸ್ಪಷ್ಟವಾಗಿ ತೋರಿಸುತ್ತವೆ.ಅವರು ಒಂದು ಬಾರಿ ಸದರಿ ಅಂಶವನ್ನು ಪರಿಗಣಿಸಿದಾಗ, ಅಂತಹ ಸಂದರ್ಭದಲ್ಲಿ, ಅಂತಿಮ ವರದಿಯನ್ನು ಸಲ್ಲಿಸುವವರೆಗೂ ಮುಂದುವರೆಯಲು ಸಾಧ್ಯವಿಲ್ಲ.ಒಂದು ಬಾರಿ ಮ್ಯಾಜಿಸ್ಟ್ರೇಟರು ಅಧಿಕಾರವನ್ನು ಚಲಾಯಿಸಿದಾಗ ಮತ್ತು ತನಿಖೆ ಮಾಡುವಂತೆ ಮತ್ತು ವರದಿ ನೀಡುವಂತೆ ಪೊಲೀಸರಿಗೆ ನಿರ್ದೇಶಿಸಿದಾಗ, ತದನಂತರ, ನಡೆಸಲೇಬೇಕಾದ ಯಾವುದೇ ತನಿಖೆಯನ್ನು ಹಿಂತೆಗೆದುಕೊಳ್ಳಲು ಪರಿಮಿತ ನಿರ್ದೇಶನಕ್ಕಾಗಿ ಮ್ಯಾಜಿಸ್ಟ್ರೇಟರು ಪೊಲೀಸರ ಮೂಲಕ ತನಿಖೆ ಮಾಡಿಸುವ ಶಾಸನಾತ್ಮಕ ಅಧಿಕಾರವನ್ನು ಚಲಾಯಿಸುವಾಗ ಅದು ಹಸ್ತಕ್ಷೇಪ ಮಾಡುತ್ತದೆ ಎಂಬುದನ್ನು ದಂಡ ಪ್ರಕ್ರಿಯಾ ಸಂಹಿತೆಯ ಅಡಿ ಯೋಜಿಸಲಾಗಿಲ್ಲ ಎಂಬುದು ಸುಸ್ಥಾಪಿತವಾದ ಕಾನೂನಿನ ನಿಯಮಗಳಾಗಿವೆ.ಮ್ಯಾಜಿಸ್ಟ್ರೇಟರು ಯಾವುದೇ ಹೆಚ್ಚಿನ ಅಧಿಕಾರ ಹೊಂದಿಲ್ಲದಿದ್ದರೂ, ಈ ಸಂಬಂಧ ಅವರ ಅಧಿಕಾರ ಸೀಮಿತವಾಗಿದೆ.ಸಾಮಾನ್ಯವಾಗಿ, ಅವರಿಗೆ ತಮ್ಮ ಸ್ವಂತ ಆದೇಶವನ್ನು ವಾಪಸ್ಸು ತರಿಸಿಕೊಳ್ಳಲು ಅಥವಾ ಮರುಪರಿಶೀಲಿಸಲು ಅಧಿಕಾರವಿಲ್ಲ.ಕಾನೂನಿನ ಈ ಪ್ರಸ್ತಾವವನ್ನು ಧರ್ಮೇಶ್ ಭಾಯ್, ವಸುದೇವ್ ಭಾಯ್ ಮತ್ತು ಇತರರು -ವಿರುದ್ಧ-ಗುಜರಾತ್ ರಾಜ್ಯ ಮತ್ತು ಇತರರು - (2009) 6 ಸರ್ವೋಚ್ಚ ನ್ಯಾಯಾಲಯದ ಮೊಕದ್ದಮೆಗಳು 576, ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ಚ ನ್ಯಾಯಾಲಯವು ವಿಧಿಸಿದೆ.ಸಂಕ್ಷಿಪ್ತತೆಯ ದೃಷ್ಟಿಯಿಂದ ಕಂಡಿಕೆ 1 ಮತ್ತು 8 ನ್ನು ನಾನು ಉಲ್ಲೇಖಿಸಿದ್ದು, ಅದನ್ನು ಈ ಕೆಳಗಿನಂತೆ ಓದಲಾಗಿದೆ:

"7. ಸಂಹಿತೆಯ ಪ್ರಕರಣ 156 ರ ಉಪ-ಪ್ರಕರಣ (3) ರ ಅಡಿ ಆದೇಶವನ್ನು ಹೊರಡಿಸಿದಾಗ ತನಿಖೆಯನ್ನು ನಡೆಸಬೇಕು.ತನಿಖಾಧಿಕಾರಿಯು ಆಪಾದಿಸಲಾದ ಅಪರಾಧ ನಡೆದಿಲ್ಲವೆಂಬ ನಿರ್ಣಯಕ್ಕೆ ಬಂದಾಗ ಮಾತ್ರ ಮೇಲ್ನೋಟಕ್ಕೆ ಮೊಕದ್ದಮೆಯನ್ನು ಹೂಡಲಾಗಿದೆ ಎಂದು ಕಂಡುಬಂದರೆ, ಆರೋಪಪಟ್ಟಿಯನ್ನು ಸಲ್ಲಿಸಬೇಕು.

8. ನಡೆಸಬೇಕೆಂದು ಕೋರಲಾದಂಥ ಯಾವುದೇ ತನಿಖೆಯನ್ನು ಹಿಂತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದ ಪರಿಮಿತ ನಿರ್ದೇಶನಕ್ಕೆ ಸಂಬಂಧಿಸಿದಂತೆ ಮ್ಯಾಜಿಸ್ಟ್ರೇಟರು ಪೊಲೀಸರ ಮೂಲಕ ಶಾಸನಬದ್ಧ ಅಧಿಕಾರವನ್ನು ಚಲಾಯಿಸುವಲ್ಲಿ ಹಸ್ತಕ್ಷೇಪ ಮಾಡುವುದನ್ನು ದಂಡ ಪ್ರಕ್ರಿಯಾ ಸಂಹಿತೆಯ ಅಡಿಯಲ್ಲಿ ರೂಪಿಸಲಾಗಿಲ್ಲ.ಇದಕ್ಕೆ ಸಂಬಂಧಿಸಿದಂತೆ ಮ್ಯಾಜಿಸ್ಟ್ರೇಟರಿಗೆ ಯಾವುದೇ ಅಂತರ್ನಿಹಿತ ಅಧಿಕಾರವಿಲ್ಲದಿದ್ದಾಗ್ಯೂ ಸಹ ಈ ಸಂಬಂಧ ಅವರ ಅಧಿಕಾರ ಪರಿಮಿತವಾಗಿದೆ.ಆದಾಗ್ಯೂ, ಬೇರೆ ರೀತಿಯಲ್ಲಿ,

ಸಾಮಾನ್ಯವಾಗಿ ಅವರಿಗೆ ತಮ್ಮ ಆದೇಶವನ್ನು ವಾಪಸ್ಸು ತರಿಸಿಕೊಳ್ಳುವ ಅಧಿಕಾರವಿಲ್ಲ.ವಿಷಯದ ಈ ಅಂಶವನ್ನು ಈ ನ್ಯಾಯಾಲಯವು ಎಸ್.ಎನ್. ಶರ್ಮಾ ವಿರುದ್ಧ ಬಿಪೆನ್ ಕುಮಾರ್ ತಿವಾರಿಯ ಮೊಕದ್ದಮೆಯಲ್ಲಿ ಪರಿಗಣನೆಗೆ ತೆಗೆದುಕೊಂಡಿದೆ.99

20. ಕಾನೂನಿನ ಸದರಿ ಪ್ರಸ್ತಾವವನ್ನು ಪರಿಶೀಲಿಸಿದ ಮೇಲೆ, ಒಮ್ಮೆ ಎಫ್ಐಆರ್ ದಾಖಲಿಸಲು ದೂರನ್ನು ಕಳುಹಿಸಿದ ನಂತರ ಮತ್ತು ಅದರಲ್ಲಿ ಒಳಗೊಂಡಿರುವ ಆಪಾದನೆಗಳ ಮೇಲೆ ತನಿಖೆಗೆ ಆದೇಶಿಸಿದ ನಂತರ, ಮಾನ್ಯ ಮ್ಯಾಜಿಸ್ಟ್ರೇಟರು ಆದೇಶವನ್ನು ವಾಪಸ್ಸು ತರಿಸಿಕೊಳ್ಳಲು ಅಧಿಕಾರ ವ್ಯಾಪ್ತಿ ಹೊಂದಿಲ್ಲ.ಕಾನೂನಿನ ಈ ಪ್ರಸ್ತಾವವನ್ನು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಸುಬ್ರಮಣಿಯಂ ಸೇತುರಾಮನ್ -ವಿರುದ್ಧ- ಮಹಾರಾಷ್ಟ್ರ ರಾಜ್ಯ 4 ಪ್ರಕರಣದಲ್ಲಿ ಸಹ ವಿಧಿಸಿದೆ.14 ನೇ ಕಂಡಿಕೆಯಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಡಲಾಗಿದೆ:

"14. ಅದಾಲತ್ ಪ್ರಸಾದ್ ಪ್ರಕರಣದಲ್ಲಿ, ಕೆ.ಎಂ. ಮ್ಯಾಥ್ಯ ಪ್ರಕರಣದಲ್ಲಿ ಈ ನ್ಯಾಯಾಲಯದ ಸದರಿ ಅಭಿಪ್ರಾಯವನ್ನು ಈ ನ್ಯಾಯಾಲಯವು ಪರಿಗಣಿಸಿದೆ ಮತ್ತು 204 ನೇ ಪ್ರಕರಣದಡಿ ಆದೇಶಿಕೆಯನ್ನು ಹೊರಡಿಸುವುದು, ಸ ಂ ಹಿತೆಯ XX ನೇ ಅಧ್ಯಾಯದಲ್ಲಿ ಉದ್ದೇಶಿಸಲಾದ ಅಧಿವಿಚಾರಣೆಯ ಹಂತದಲ್ಲಿ ಪ್ರಾರಂಭಿಕ ಕ್ರಮವಾಗಿದೆ ಎಂದು ಅಭಿಪ್ರಾಯಪಟ್ಟಿದೆ.ಪ್ರಾರಂಭಿಕ ಹಂತದಲ್ಲಿ ಮಾಡಲಾದ ಅಂತಹ ಆದೇಶವು ವಾದಕಾಲೀನ ಆದೇಶವಾಗಿದ್ದು, ಅದೇ ನ್ಯಾಯಾಲಯವು ಆದೇಶದ ಪುನರವಲೋಕನ ಮಾಡುವುದಕ್ಕೆ ಸಂಬಂಧಿಸಿದಂತೆ ಸಂಹಿತೆಯಡಿ ಯಾವುದೇ ಉಪಬಂಧವಿಲ್ಲದ್ದರಿಂದ ಅದನ್ನು ಮ್ಯಾಜಿಸ್ಟ್ರೇಟರು ಪುನಃ ಪರಿಶೀಲಿಸಲಾಗದು ಅಥವಾ ಪುನಃ ಪರಿಗಣಿಸಲಾಗದು.ಆದ್ದರಿಂದ, ಅಂತಹ ಆದೇಶವನ್ನು ವಾಪಸ್ಸು ತರಿಸಿಕೊಳ್ಳುವ ಯಾವುದೇ ನಿರ್ದಿಷ್ಟ ಉಪ ಬಂಧವಿಲ್ಲದ್ದರಿಂದ ಆದೇಶಿಕ ಹೊರಡಿಸುವಿಕೆಗೆ ಸಂಬಂಧಿಸಿದಂತೆ ತಮ್ಮ ನಿರ್ಣಯವನ್ನು ಮರುಪರಿಶೀಲಿಸಲು ಮ್ಯಾಜಿಸ್ಟ್ರೇಟರಿಗೆ ಅನುಮತಿಸಲಾಗುವುದಿಲ್ಲ.ಆ ನಿಟ್ಟಿನಲ್ಲಿ ತಾರ್ಕಿಕ ಪ್ರತಿಪಾದನೆಗಾಗಿ ಈ ನ್ಯಾಯಾಲಯವು ಅದಾಲತ್ ಪ್ರಸಾದ್ ಪ್ರಕರಣದಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ: (ಎಸ್ಸಿಸಿ, ಪು. 343, ಕಂಡಿಕೆ 16)

"ಆದುದರಿಂದ, ಅಧಿಕಾರವ್ಯಾಪ್ತಿಯಿಲ್ಲದ್ದಕ್ಕೆ ಸಮಾನವಾಗುವ ದೋಷವುಳ್ಳ ಆದೇಶವನ್ನು ವಾಪಸ್ಸು ತರಿಸಿಕೊಳ್ಳಲು, ಯಾವುದೇ ನಿರ್ದಿಷ್ಟ ಉಪಬಂಧದ ಅಗತ್ಯವಿಲ್ಲವೆಂದು ಈ ನ್ಯಾಯಾಲಯವು ಮ್ಯಾಥ್ಯ ಪ್ರಕರಣದಲ್ಲಿ ಪಟ್ಟಿರುವ ಅಭಿಪ್ರಾಯವು ಸರಿಯಾದ ಕಾನೂನನ್ನು ವಿಧಿಸಿಲ್ಲ ಎಂಬುದು ನಮ್ಮ ಅಭಿಪ್ರಾಯವಾಗಿದೆ ...... "

21. ಕಾನೂನಿನ ಸದರಿ ಪ್ರಸ್ತಾವವನ್ನು ಮತ್ತು ಸದ್ಯದ ಪ್ರಕರಣದ ಸಂಗತಿಗಳು ಹಾಗೂ ಸನ್ನಿವೇಶಗಳನ್ನು ಪರಿಶೀಲಿಸಿದ್ದು, ಅವು ಸದ್ಯದ ಪ್ರಕರಣದ ಈಗಿನ ಸಂಗತಿಗಳಿಗೆ ಸಮರ್ಪಕವಾಗಿ ಅನ್ವಯವಾಗಿವೆ.

22. ಅಧಿವಿಚಾರಣಾ ನ್ಯಾಯಾಲಯದ ಆದೇಶವನ್ನು ಪರಿಶೀಲಿಸಿದ್ದು, ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ವಿಷಯದಲ್ಲಿ ಸೂಕ್ತ ನ್ಯಾಯಿಕ ವಿವೇಚನೆಯನ್ನು ಬಳಸದೆ ಕಾನೂನುಬಾಹಿರವಾಗಿ ವರ್ತಿಸಿದ್ದಾರೆ ಮತ್ತು ಮೊಕದ್ದಮೆಯನ್ನು ಕೈಬಿಡುವಂತೆ ನಿರ್ದೇಶಿಸಿದ್ದಾರೆ.ತನಿಖೆಯು ಪೂರ್ಣಗೊಳ್ಳದಿದ್ದಾಗ ಅವರಿಗೆ ತಮ್ಮದೇ ಆದೇಶವನ್ನು ವಾಪಸ್ಸು ತರಿಸಿಕೊಳ್ಳಲು ಅಥವಾ ಪುನರ್ ಪರಿಶೀಲಿಸಲು ಅಧಿಕಾರವಿಲ್ಲ.ಅದು ಅಪೀಲು ನ್ಯಾಯಾಲಯದ ಅಧಿಕಾರವಾಗಿದೆ.ಆ ನಂತರ, ಅಂತಹ ಸನ್ನಿವೇಶಗಳಡಿ ಅಧಿವಿಚಾರಣಾ ನ್ಯಾಯಾಲಯದ ಪ್ರಶ್ನಿತ ಆದೇಶಗಳು ಕಾನೂನಿನಲ್ಲಿ ಸಮರ್ಥನೀಯವಾಗಿಲ್ಲ.

23. ಮೇಲೆ ಹೇಳಲಾದ ಸ ಂ ಗತಿಗಳು ಮತ್ತು ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು, ಎರಡೂ ಅರ್ಜಿಗಳನ್ನು ಪುರಸ್ಕರಿಸಲಾಗಿದೆ ಮತ್ತು ದಿನಾಂಕ:2.11.2016 ಹಾಗೂ 25.01.2017 ರ ಪ್ರಶ್ನಿತ ಆದೇಶಗಳನ್ನು ರದ್ದುಪಡಿಸಲಾಗಿದೆ ಮತ್ತು ಮೇಲೆ ಅಭಿಪ್ರಾಯಪಡಲಾದಂತೆ, ಕಾನೂನಿಗೆ ಅನುಸಾರವಾಗಿ ಮುಂದುವರೆಯಲು ಕೆಳ ನ್ಯಾಯಾಲಯಕ್ಕೆ ವಿಷಯವನ್ನು ವಾಪಸ್ಸು ಕಳುಹಿಸಲಾಗಿದೆ.

24. ಮಾನ್ಯ ಮ್ಯಾಜಿಸ್ಟ್ರೇಟರು ತಮ್ಮದೇ ಆದೇಶವನ್ನು ವಾಪಸ್ಸು ತರಿಸಿಕೊಳ್ಳಲು ಅಥವಾ ಪುನರ್ ಪರಿಶೀಲಿಸಲು ಯಾವುದೇ ಅಧಿಕಾರವನ್ನು ಹೊಂದಿಲ್ಲವೆಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಾಗ, ಅಂತಹ ಸಂದರ್ಭಗಳಲ್ಲಿ, ದಂಡ ಪಕ್ರಿಯಾ ಸಂಹಿತೆಯ 173 (2) ನೇ ಪ್ರಕರಣದಡಿ ಅಂತಿಮ ವರದಿಯನ್ನು

ನೀಡುವವರೆಗೂ ಅವರು ಕಾಯಬೇಕಾಗುತ್ತದೆ.ಅಂತಹ ವರದಿಯನ್ನು ಸ್ವೀಕರಿಸಿದ ನಂತರ, ಅವರು ವಿಷಯವನ್ನು ಕಾನೂನಿನ ಅನುಸಾರವಾಗಿ ಪರಿಗಣಿಸುವ ಸ್ವಾತಂತ್ರ್ಯವನ್ನು ಹೊಂದುತ್ತಾರೆ.

ಮುಖ್ಯ ಅರ್ಜಿಯನ್ನು ವಿಲೆಯಾಗಿರುವುದರಿಂದ ದೃಷ್ಟಿಯಿಂದ ಐ.ಎ.ಸಂಖ್ಯೆ: 1/2018 ಪರಿಗಣನೆಗೆ ಉಳಿಯುವುದಿಲ್ಲ.